of Libraries, it is understood from the D.P.A.R. that these allegations were referred to the Vigilance Commission some time in July, 1976 for investigation. It appears the report of the Vigilance Commission has not yet been received by the Department. I would like to know what has happened to this report. Whether the Vigilance Commission has already completed its enquiry and given the report? If so, kindly place the report on the table of the House I think this was referred to COD also. Anyway, I request the hon. Minister to give this information also while replying day after tomorrow.

ಶ್ರೀ ಜಿ. ಬಿ. ಶಂಕರ ರಾವ್.—ಮಾನ್ಯ ಸದಸ್ಯರ ಭಾವನೆಯಂತೆ ಅವರ ಸಮಸ್ಯೆಗಳು ಏನೇನು ಇವೆ ಅವನ್ನೆಲ್ಲ ತಿಳಿದುಕೊಂಡು ಉತ್ತರ ಕೊಡುವಾಗ ಸಮರ್ಥ ರೀತಿಯಲ್ಲಿ ಉತ್ತರ ಕೊಡುತ್ತೇನೆಂದು ಹೇಳುತ್ತೇನೆ.

Death of Sadhu in Police Custody

†SRI A. LAKSHMI SAGAR (Chickpet).—I seek your kind indulgence in the matter which was not conclusively dealt with *viz.*, the notice of Adjournment Motion I gave some time ago.

MR. SPEAKER.—There is no adjournment motion before me. Even priliminary hearing was over and I have already withheld my consent. That matter has already been concluded. What is that you want now? There is no adjournment motion pending before me.

SRI A. LAKSHMI SAGAR:—Anyhow the discussion on the statements of the Chief Minister on two occasions in respect of this matter has taken a new turn and a serious turn. The Statement has not clarified our grave doubts about the death of Sadhu in the police custody, which is an admitted fact.

I made a request yesterday that a copy of the post-mortem report should have been made available to us in order to enable us to know the details of the wounds which were found on the body of the Sadhu. This post-mortem report, among other things, will give a description of the number of wounds on the body of the dead person and the places of the body over which those wounds were found and the nature of the wounds and internal injuries, if any. All these details should have been made available to us about which I made a request yesterday. All that has now been done is, a copy of the inquest report of the SDM is made available to us only after the Session began,

The matter is not still over. There are several factors but I will confine myself to some of the more important factors in respect of this sordid episode.

ಅಧ್ಯಕ್ಷರು.—ತಮ್ಮ ಅಪೇಕ್ಷೆಯ ಮೇರೆಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಮನೆಯಲ್ಲಿ ನಿನ್ನೆ ಒಂದು ಹೇಳಿಕೆಯನ್ನು ಕೊಟ್ಟಿರುತ್ತಾರೆ. ಪುನಃ ಈ ವಿಚಾರದಲ್ಲಿ ಸ್ಪಷ್ಟೀಕರಣ ಬೇಕಾಗಿದ್ದರೆ ಸಂಕ್ಷಿಪ್ತವಾಗಿ ಕೇಳಿ.

SRI A. LAXMI SAGAR.—Sir, this house should address itself to the matter that requires serious consideration. I will recall, in a very short span, the events leading to the present situation. The Sadhu died admittedly in the Victoria Hospital on the 5th. The Inquest Report was ready on the 5th itself. The Post-mortem was conducted and the report was awaited because of the report from the Pathologists i.e. Histo-pathological report. Now, that is also received. Now, the Distict Magistrate, acting *suo moto* under Section 173 of the Cr. P C has ordered a second autopsy on the dead body of the Sadhu. This has given a new turn to the entire episode. The matter should be looked at very objectively. The process of Inquest Report and the process of post-mortem report are both in the process of investigation of the death of the Sadhu in police custody. They are aids in the process of investigation of the case. After having received the post-mortem report from the Victoria Hospital doctor, there was nothing more for the Government to do in the matter. I cannot nniderstand the necessity of getting a second autopsy under the leadership of the District Magistrate who is also a civil servant like the S.D.M. The S.D M. under the law is required to give visual description of the body as he found. He is not expected to do anything beyond this. This is the requirement of the law. The more important document that is necessarily to be considered in this case is the post-mortem report of Dr. Chandre Gowda which he admittedly did immediately after the death of the Sadhu. According to the press report, time is ot given to him. If I may draw this inference from the press reports the body was handed over to him after the inquest by the S.D.M. at about 2 O'Clock in the afternoon and Dr. Chandre Gowda completed his post-mortem examination by about 5'Clock in the evening and he did conduct this examination when the body had not reached the stage of de-composition. Any examination by way of second autopsy, after a lapse of a period of five days will serve no purpose.

This is a serious matter that has to be considered. The Government has fresh explanation. But, the Government must also consider the serious situation in the context in which things have developed in this case. What is the purpose of the second autopsy which si conducted after five days? It is admitted by all medical authors of medical jurisprudence that any examination conducted on the dead person after 12 hours will serve no purpose. This is a fact which must be seriously considered. Now, why is the Government tring to indulge in all these acrobatics; indulging in tight rope walking? Why

are they doing? Why have they suspended Sri Shivaswamy and why not Sri Sangappa? Why not other Police Offices connected with the investigation suspended? If the logic behind suspension of Sri Shivaswamy is that he has something to do with the death of Sadhu the same logic would hold good in the case of Sri Sangappa, who according to my submission, gave a blatant and false report. That is why the report did not come within the time. There is a lapse of few days between the date of the death and date of inquest. This is a matter that requires serious consideration. This is my submission. The last point that I would like to bring to your kind notice is this the Hon. Chief Minister said that any further action that has to be taken against this officer will depend upon the final report to be received by the Additional District Magistrate. The Additional District Magistrate is a civil servant. He has got to depend upon the second post-mortem report of the pathologists on this matter. Where is the finality for the final report? What is the authority of the Government and under what provision of law, they can extend this examination by way of post-mortem on the body of a dead person one after the other If the second autopsy also indicates the same findings as the first autopsy, what are they going to do? If it is otherwise, how do they accept the latest one in preference to the second one? Under which law they are going to do it? My submission is, the Government has not come out in flying colours, there is a ground for suspicion. If felt on the day on which the Hon. Chief Minister read out some portions of the inquest report, I felt myself that the statement contained facts suppressed from suggestive fallacy. But, unfortunately, the Panel Chairman did not allow me to make my comments. Therefore, Sir, taking all these factors into consideration even though the mover of this resolution is not there, all the same you were good enough to permit me to make my submission. So, my submission is that the Government must immediately come forward to institute a judicial enquiry into the entire sordid episode, to go into the ramifications with respect to this incident. Sir, I must in end make myself clear, that I am not saying anything in favour of the so called Sadhu and his involvement. In the Commission of five crimes that took place in Bangalore City, if a man if found guilty, he must be hanged to the nearest lamp post. But what we are really concerned with is that a man has died in the police custody admittedly But this is not the first time that such a thing has happened. In Bangalore City alone in the last two years there were similar deaths is Commercial Police Station, Ashok Nagar Police Station, Jayanagar Police Station etc., This has become almost an ordinary feature and a day will come, when we will lose all faith in the efficacy of the police administration in our State. This is the seriousness of the matter. Therefore, I request

through you Sir, that let them not stand on formality. Let the guilty persons be booked and punished after having arraigning them before court of law. Let them not shield persons who are responsible for this homicide. This is my submission. Thank you for allowing me to make my statement.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಮೊನ್ನೆ ಮಾನ್ಯ ಮುಖ್ಯ ಮಂತ್ರಿಯವರು ಈ ಸಭೆಯ ಮುಂದೆ ವೈದ್ಯರ ವರದಿಯನ್ನು ಇಟ್ಟ ಮೇಲೆ ನಾನು ಆ ಬಗ್ಗೆ ಮಾತನಾಡಬೇಕೆಂದು ಮನಸ್ಸು ಮಾಡಿದ್ದೇನೆ. ಆ ವರದಿಯಲ್ಲಿ ಈ ರೀತಿ ಇದೆ.—

1. All the injuries found on the body are ante-mortem and fresh.

2. The injuries could be caused by a blunt and hard weapon or object.

3. The cause of death is due to shock and haemorrhage as a result of multiple injuries sustained.

ಇದಕ್ಕೆ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ವಂದಿಸುತ್ತೇನೆ. ಕಾರಣ ಏನೆಂದರೆ, ಪೋಸ್ಟ್ ಮಾರ್ಟಮ್ ರಿಪೋರ್ಟಿನಲ್ಲಿ ಏನು ಸ್ಪಷ್ಟವಾಗಿ ಹೇಳಲಾಗಿದೆ ಅದನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಸದನದ ಸದಸ್ಯರಾದ ಶ್ರೀ ದೇವೇಗೌಡರು, ಶ್ರೀ ಲಕ್ಷ್ಮೀಸಾಗರ್ ಅವರು ಮತ್ತು ಶ್ರೀ ಬೊಮ್ಮಾಯಿಯವರು ಸಾಧುವಿನ ಸಾವಿನ ಬಗ್ಗೆ ಸತ್ಯಾಂಶವನ್ನು ತಿಳಿಯುವ ಸಲುವಾಗಿ ಐದನೆ ತಾರೀಖಿನಿಂದ ಇದುವರೆವಿಗೂ ಕೂಡ ಸತತವಾಗಿ ಪ್ರಯತ್ನ ಮಾಡಿದ್ದಾರೆ. ಇದೇನೂ ಸಾಮಾನ್ಯ ಸಾವಲ್ಲ, ಈ ಸಾಧು ಪೋಲೀಸರ ವಶದಲ್ಲಿದ್ದಾಗ ಸಂಭವಿಸಿರುವುದರಿಂದ, ಇದು ಖೂನಿ ಇರಬಹುದು ಎಂದು ವಾದ ಮಾಡುತ್ತಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಯವರು ಏನು ವರದಿಯನ್ನು ಸದನದ ಮುಂದಿಟ್ಟಿದ್ದಾರೆ ಅದನ್ನು ನೋಡಿದ ಮೇಲೆ ಒಂದು ವಿಚಾರ ನನಗೆ ಸ್ಪಷ್ಟವಾಗುತ್ತಿದೆ. ಅದೇನೆಂದರೆ, ಇದು ಖೂನಿ ಆಗಿರಬಹುದು ಎಂದು. ಮಾನ್ಯ ಮುಖ್ಯ ಮಂತ್ರಿಯವರು ಇನ್‌ಕ್ವೆಸ್ಟ್ ರಿಪೋರ್ಟನ್ನು ಓದುವಾಗ ಬಹಳ ಲೀಲಾಜಾಲವಾಗಿ ಓದುತ್ತಿದ್ದರು. ಮರ್ಮಾಂಗದಲ್ಲಿ ಆಗಿರುವ ಗಾಯವನ್ನು ಬಿಟ್ಟರೆ ಬೇರೆ ಎಲ್ಲೂ ಗಾಯಗಳೂ ಆಗಿಲ್ಲವೆಂದು ಅವರು ಹೇಳುತ್ತಿದ್ದರು. ಆಗ ನಾನು ಹಾಗೆ ಆಗಿರಬಹುದೆಂದು ತಿಳಿದುಕೊಂಡೆ. ಆ ರಿಪೋರ್ಟ್ ಬಹುಶಃ ೫ನೇ ತಾರೀಖೇ ಆಗಿರುತ್ತದೆ ; ಹಾಗೂ ಪೋಸ್ಟ್ ಮಾರ್ಟಮ್ ರಿಪೋರ್ಟು ಕೂಡ ಆಗಲೇ ಆಗಿರಬಹುದು. ಆದರೆ ೮ನೇ ತಾರೀಖಿನವರೆಗೆ ಅಂದರೆ ಮೂರು ದಿವಸಗಳ ಕಾಲ ಯಾರ ಹತ್ತಿರ ಇತ್ತು ? ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ರಜಾ ಹಾಕಿದ್ದರು ಎಂದು ಹೇಳಿದರು. ಅವರೇನೂ ವರದಿಯನ್ನು ತಯಾರಿಸಿ ಜೋಬಿನಲ್ಲಿ ಇಟ್ಟುಕೊಂಡು ಹೋಗುವುದಕ್ಕೆ ಅಧಿಕಾರವಿಲ್ಲ. ಅದು ಪೋಲೀಸರ ವಶದಲ್ಲಿ ಇರಬೇಕಾಗುತ್ತದೆ ಆ ರಿಪೋರ್ಟ್ ಅವರ ವಶದಲ್ಲಿ ಇದ್ದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ೫ನೇ ತಾರೀಖು ಹೇಳಬಹುದಾಗಿತ್ತು ಅಥವಾ ೬ನೇ ತಾರೀಖು ಹೇಳಬಹುದಾಗಿತ್ತು ಈ ಸದನದ ಸದಸ್ಯರು ಎಷ್ಟು ಒತ್ತಾಯ ಮಾಡಿದರೂ ಕೂಡ ಇದುವರೆಗೆ ರಿಪೋರ್ಟ್ ನಮ್ಮ ಮುಂದೆ ಬರಲಿಲ್ಲವೆಂದು ಹೇಳುತ್ತಾ ಬಂದು ನಿನ್ನೆ ಒಂದು ಪೋಸ್ಟ್‌ಮಾರ್ಟಮ್ ರಿಪೋರ್ಟ್ ಬಂದಿದೆಯೆಂದರು. ಇಲ್ಲಿ ಸಾಧು ಸತ್ತ ಬಗ್ಗೆ ನಮಗೆ ಏನೂ ವಿಶೇಷ ಕಾಣುವುದಿಲ್ಲ. ಆದರೆ ಈ ಬಗ್ಗೆ ಯಾರು ತಪ್ಪು ಮಾಡಿದ್ದಾರೆ, ಯಾರು ಅಪರಾಧ ಮಾಡಿದ್ದಾರೆ ಅವರಿಗೆ ಶಿಕ್ಷೆ ಆಗತಕ್ಕದ್ದು ನ್ಯಾಯವಾಗಿದೆ. ಅಪರಾಧವನ್ನು ಮಾಡಿದವನಿಗೆ ಶಿಕ್ಷೆಯನ್ನು ವಿಧಿಸತಕ್ಕ ಕಾನೂನು ನಮ್ಮ ದೇಶದಲ್ಲಿ ಇದೆ. ಕಾನೂನಿನ ಪ್ರಕಾರ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆ. ಆ ಸಾಧು ಪೋಲೀಸರ ಕಸ್ಟಡಿಗೆ ಹೋದನಂತರ ಅವನಿಗೆ ಸಾವು ಸಂಭವಿಸಿದೆ ಎಂಬ ವಿಷಯವನ್ನು ಕಂಡರೆ ಅದು ಬಹಳ ಆಶ್ಚರ್ಯಕರವಾಗಿ ಕಾಣುತ್ತದೆ. ಪೋಲೀಸರು ಆ ಸಾಧುವನ್ನು ಹೊಡೆದು ಸಾಯಿಸಿದ್ದಾರೆಂದು ಜನರು ಹೇಳುತ್ತಿದ್ದಾರೆ. ಜನರಲ್ಲಿ ಬಂದಿರುವ ಅನುಮಾನಕ್ಕೆ ಈ ಪೋಸ್ಟ್‌ಮಾರ್ಟಮ್ ರಿಪೋರ್ಟೆ ಸಾಕ್ಷಿಯಾಗಿದೆ.

ಇಲ್ಲಿ ಪೋಲೀಸಿನವರಿಗೆ ಕಾನೂನು ಪ್ರಕಾರ ಈ ರೀತಿ ಕೆಲಸ ಮಾಡುವುದಕ್ಕೆ ಹಕ್ಕು ಇದೆಯೋ ಅಥವಾ ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಆ ಪ್ರಶ್ನೆ ಬಂದಾಗ ಈ ಹಕ್ಕು ಅವರಿಗೆ ಇಲ್ಲವೆಂಬುದನ್ನು

ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದು ವೇಳೆ ಇದೆಯೆಂದರೆ ಈಗ ಆಗಿರತಕ್ಕಂತಹ ಸಾವಿಗೆ ಯಾವ ಕಾರಣವೂ ದೊರೆಯುವುದಿಲ್ಲ. ಆದ್ದರಿಂದ ೫ ದಿವಸಗಳು ಆದಮೇಲೆ ಪುನಃ ಹೊಸದಾಗಿ ಪೋಸ್ಟ್ ಮಾರ್ಟಮ್ ಮಾಡಿದರೆ ಅದು ಇದಕ್ಕಿಂತ ತದ್ವಿರುದ್ಧವಾಗಿ ಬರುತ್ತದೆಂದು ತಾವು ನಿರೀಕ್ಷೆ ಮಾಡಿಕೊಂಡಿಲ್ಲ ವೆಂದು ಕಾಣುತ್ತದೆ ! ಅದು ಖಂಡಿತಾ ತದ್ವಿರುದ್ಧವಾಗಿ ಬರುತ್ತದೆ. ಮೊದಲನೆಯದಾಗಿ ಏನೊಂದು ಪೋಸ್ಟ್‌ಮಾರ್ಟಂ ರಿಪೋರ್ಟನ್ನು ಡಾಕ್ಟರ್ ಕೊಟ್ಟಿದ್ದಾರೆ, ಅದೇ ನಿಜವಾಗಿರತಕ್ಕಂಥಹದ್ದು, ಸತ್ಯವಾಗಿರ ತಕ್ಕಂಥಹದ್ದು, ಆದ್ದರಿಂದ, ಅದನ್ನು ನಂಬಬೇಕೆ ವಿನಃ ಸತ್ತು ೫-೬ ದಿವಸಗಳಾದ ಮೇಲೆ ಬರತಕ್ಕಂತಹ ಅಂದರೆ ೨ನೇ ಸಾರಿ ಪೋಸ್ಟ್‌ಮಾರ್ಟಮ್ ಮಾಡಿ ಕೊಡತಕ್ಕಂತಹ ವರದಿ ಅಷ್ಟಾಗಿ ಸಾಕ್ಷಿ ಭೂತವಾಗಿ ಬರುತ್ತದೆಂದು ನಂಬುವುದಕ್ಕಾಗುವುದಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ಏನು ಇದ್ದಾರೆ ಅವರು ಜ್ಯುಡಿಷಿಯಲ್ ಆಫೀಸರ್ಸ್ ಅಲ್ಲವೇ ಅಲ್ಲ. ಆದ್ದರಿಂದ ಅವರಿಂದ ಪುನಃ ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ಪ್ರಯತ್ನ ಮಾಡಬಾರದು. ಇದರಲ್ಲಿ ಯಾರು ಶಿಕ್ಷೆಗೆ ಒಳಪಡುತ್ತಾರೆ (ಪೋಲೀಸರಾಗಲಿ, ಸಬ್ ಇನ್‌ಸ್ಪೆಕ್ಟರ್ ಆಗಲಿ) ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಕಾನೂನು ಪ್ರಕಾರ ಅಂತಹವರಿಗೆ ಶಿಕ್ಷೆ ಮಾಡಲೇಬೇಕು. ಇದಕ್ಕೆ ಜ್ಯುಡಿಷಿಯಲ್ ಪ್ರೋಬ್ ಮಾರ್ಗ ಒಂದೇ ವಿನಃ ಬೇರೊಂದು ಮಾರ್ಗ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಕೇರಳದಲ್ಲಿ ರಾಜನ್ ಕೇಸ್ ನಲ್ಲಿ ಕಮೀಷನರ್‌ರವರಿಂದ ಹಿಡಿದು, ಮುಖ್ಯ ಮಂತ್ರಿಗಳೂ ಕೂಡ ರಾಜೀನಾಮೆ ಕೊಡತಕ್ಕಂತಹ ಪ್ರಸಂಗ ಬಂತು. ದೊಡ್ಡ ದೊಡ್ಡ ಉನ್ನತ ಅಧಿಕಾರಿಗಳ ಮೇಲೆ ಕೂಡ ಚಾರ್ಜ್‌ಷೀಟ್ ಹಾಕಲಾಗಿ, ಅವರುಗಳೆಲ್ಲ ಶಿಕ್ಷೆಯನ್ನು ಅನುಭವಿಸತಕ್ಕಂಥ ಪ್ರಸಂಗ ಬಂತು. ಸಾಮಾನ್ಯವಾಗಿ ಇದನ್ನು ಯಾರೂ ಹಗುರವಾದ ವಿಷಯ ಎಂದು ತಿಳಿದುಕೊಂಡಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸ್ಪಷ್ಟ ವಾಗಿ ಹೇಳುತ್ತೇನೆ. ಮುಖ್ಯ ಮಂತ್ರಿಗಳು ಪೋಲೀಸ್ ಇಲಾಖೆಯ ಮಂತ್ರಿಗಳೂ ಆಗಿದ್ದಾರೆ ಆ ಇಲಾಖೆಯ ಬಗ್ಗೆ ಅವರಿಗೆ ಯಾವ ವ್ಯಾಮೋಹ ಇದ್ದಹಾಗೆ ಇಲ್ಲವೆಂದು ನನಗನ್ನಿಸುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ವರದಿಯನ್ನು ಓದಿದ ಮೇಲೆ ನನಗೆ ಖುಷಿಯಾಯಿತು ಅದರಲ್ಲಿ ಯಾರ್ಯಾರು ಅಪರಾಧಕ್ಕೆ ಕಾರಣಕರ್ತರಾಗಿದ್ದಾರೆ ಅವರ ಮೇಲೆ ಅತ್ಯವಶ್ಯಕವಾಗಿ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳಬೇಕೆಂದು ಈ ಸಭೆಯಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ಆದ್ದರಿಂದ ಇವರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ಇಲ್ಲದಿದ್ದರೆ, ಸತ್ಯಾಂಶ ಹೊರಕ್ಕೆ ಬರುವುದಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಸರ್ಕಾರದವರು ಇದಕ್ಕೆ ಹಿಂಜರಿಯದೇ ಯಾರ್ಯಾರು ಶಿಕ್ಷೆಗೆ ಅರ್ಹರಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರ ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ದಾರಿ ಮಾಡಿಕೊಡ ಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾವು ಕಳೆದ ಒಂದು ವಾರದಿಂದ ಪ್ರಸ್ತಾಪ ಮಾಡುತ್ತಿದ್ದೇವೆ. ಪುನಃ ಪುನಃ ಹೇಳಿದ್ದನ್ನೇ ಹೇಳುವ ಇಚ್ಛೆ ನನಗಿಲ್ಲ. ಒಂದು ರೀತಿಯಿಂದ ಈ ಘಟನೆ ನಡೆದ ಮೇಲೆ ಈ ಸದನದಲ್ಲಿ ಆದಂತಹ ಚರ್ಚೆಯನ್ನು ಅವಲೋಕಿಸಿದಾಗ ಸರ್ಕಾರ ಈ ಮನೆಯನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ಮಾನ್ಯ ಅರ್ಥ ಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯ್ಲಿರವರು ಈ ವಿಚಾರವಾಗಿ ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪ್ರವಾಸದಿಂದ ವಾಪಸ್ಸು ಬಂದ ಮೇಲೆ ನಿನ್ನೆ ದಿವಸ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಿನ್ನೆಯ ಹೇಳಿಕೆಯನ್ನು ಮತ್ತು ಮಾನ್ಯ ಅರ್ಥಮಂತ್ರಿಗಳು ಹಿಂದೆ ಕೊಟ್ಟಂತಹ ಹೇಳಿಕೆಯನ್ನು ನೋಡಿದಾಗ ಅದು ಸ್ವಾಭಾವಿಕವಾಗಿ ಆದಂತಹ ಸಾವು ಅಲ್ಲ ಎಂಬುದು ಅರ್ಥವಾಗುತ್ತದೆ. ಏಕೆಂದರೆ ಪೋಲೀಸ್ ಸ್ಟೇಷನ್‌ನಲ್ಲಿ ಆ ಸಾಧು ಸತ್ತಿದ್ದಾನೆ. ಒಬ್ಬ ಕ್ರೂರಿಯನ್ನು ಪೋಲೀಸಿನವರು ಪತ್ತೆ ಮಾಡಿ ಅವನನ್ನು ವಿಚಾರಣೆಗೆ ಗುರಿ ಮಾಡಿದ್ದರೆ ಶಹಭಾಸ್‌ಗಿರಿ ಕೊಡಬೇಕು ಎನ್ನುವ ಮಾತನ್ನೂ ಕೂಡ ಹೇಳಿದರು. ಮಕ್ಕಳ ಕೊಲೆ ವಿಚಾರದಲ್ಲಿ ಪೋಲೀಸಿನವರು ಈ ಸಾಧು ಕಾರಣವಾಗಿದ್ದಾನೆ ಎಂಬುದಾಗಿ ತಿಳಿಸಿದ್ದಾರೆ. ಅದಕ್ಕೆ ಶಹಭಾಸ್ ಕೊಡೋಣ. ಮತ್ತೆ ಕಾನೂನು ಪ್ರಕಾರ ಅಂತಹವರಿಗೆ ಪ್ರಮೋಷನ್ ಕೊಡುವುದಕ್ಕೆ ಬರವುದಿದ್ದರೆ ಕೊಡೋಣ. ಆದರೆ ಆ ಸಾಧುವು ಪೋಲೀಸ್ ಕಸ್ಟಡಿ ಯಲ್ಲಿದ್ದಾಗ ಪೋಲೀಸಿನವರ ಹೊಡೆತದಿಂದ ಸತ್ತಿದ್ದಾನೆ. ಈ ಬಗ್ಗೆ ಪತ್ರಿಕಾಕರ್ತರನ್ನು ನಾವು ಅಭಿನಂದಿಸಬೇಕಾಗಿದೆ. ಈ ರಾಷ್ಟ್ರದಲ್ಲಿ ಕೆಲವು ಪತ್ರಿಕೆಗಳು ಸ್ವತಂತ್ರವಾಗಿ ನಿರ್ಭಯದಿಂದ ಕಂಡದ್ದನ್ನು

ಬರೆಯುವಂತಹ ಮನೋಧೈರ್ಯ, ಸ್ಥೈರ್ಯ ಉಳಿಸಿಕೊಂಡಿವೆ ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ಪತ್ರಿಕೆಗಳ ಮುಖಾಂತರ ನಮಗೆಲ್ಲಾ ಈ ವಿಷಯ ಗೊತ್ತಾಗಿದ್ದು. ಅವರು ತಮ್ಮ ಕರ್ತವ್ಯ ಮಾಡಿದ್ದಾರೆ. ಮಾನ್ಯ ಅರ್ಥ ಮಂತ್ರಿಗಳೂ ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ದುಡುಕಬಾರದಾಗಿತ್ತು. ಮೊದಲನೆ ಹೇಳಿಕೆಯನ್ನು ನೋಡಿದಾಗ ಪೋಲೀಸ್ ಸ್ಟೇಷನ್‌ನಲ್ಲಿ ಏನೊಂದು ಅಪರಾಧವೂ ನಡೆದಿಲ್ಲ ಎನ್ನುವ ದಾಟಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಅದು ಆದ ಮೇಲೆ ಪುನಃ ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಪೂರ್ಣ ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದ ಮೇಲೆ ಅದರ ಆಧಾರದ ಮೇಲೆ ಹೇಳಿಕೆಯನ್ನು ಕೊಟ್ಟಿಲ್ಲ. ಹಿಂದಿನ ಹೇಳಿಕೆಯನ್ನೇ ತಿದ್ದಿ ಕೊಟ್ಟಿದ್ದಾರೆ. ಅವರು ಹೇಳಿಕೆ ಕೊಡುವಾಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ರೂಲ್ ೧೭೬ರ ಪ್ರಕಾರ ಪುನಃ ವಿಚಾರಣೆ ಮಾಡುತ್ತಿದ್ದಾರೆ ಎಂದು ಹೇಳಿದರು, ಅಲ್ಲದೆ, ಹೆಣವನ್ನು ತೆಗೆದು ಪುನಃ ಪರೀಕ್ಷೆಗೆ ಒಳಪಡಿಸಿದ್ದಾರೆ ಎಂದು ಕೂಡ ಹೇಳಿದರು. ಇದನ್ನು ನೋಡಿದಾಗ ಸರ್ಕಾರ ಹಾಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್‌ರವರು ಕಾನೂನನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂಬುದಾಗಿ ಹೇಳಬೇಕಾಗುತ್ತದೆ. ಈ ಬಗೆ ಸೆಕ್ಷನ್ ೧೭೬ರಲ್ಲಿ ಬಹಳ ಸ್ಪಷ್ಟವಾಗಿದೆ.

Sec. 176 of Cr. P.C. reads like this :

> "When any person dies while in the police custody the nearest Magistrate empowered to hold the enquiry shall and in any other case mentioned in sub-sec. 1 of Sec. 174—any Magistrate so empowered may hold the enquiry into the cause of the death either, instead of or in addition to the investigation held by the Police Officer and if he does so, he would have all the power in conducting the enquiry, which he would have in holding enquiry in other cases etc.,

ಎಲ್ಲ ಹೇಳುತ್ತಿದ್ದಾರೆ.

Then sub-sec. 3 says :

> "Whenever such Magistrate considers it expedient to make examination of a dead body of any person, who has already interned in order to discover the cause of the death, the Magistrate can call the body disinterned and examine it.

Firstly, it was sent for post-mortem examination and then the body was permitted to be buried. Sec. 176 only contemplates that the Magistrate having jurisdiction to hold the enquiry suspects, the post-mortem examination has to be done. It also empowers the Magistrate to order for the re-examination if there was no post-mortem examination of the dead body. But this has been done already. Absolutely, there was no need for the District Magistrate when once the matter was seized by the Sub-Divisional Magistrate. He is the person who is empowered under the Act. How has the District Additional Magistrate got the powers ? Who asked him to go into the matter ? Once it is seized by the Sub-Divisional Magistrate,

the District Magistrate has no power. This gives room for suspecting the very bonafides of the Chief Minister and the Government. There is something fishy in the whole question. *Prima facie* there is the post-mortem report given by the Head of the Department of Victoria Hospital. It is only for the court to examine so far as the evidences are concerned. The enquiry Officer cannot go into the meritsor the demer its of the case. The super enquiry imposed on the post-mortem held by Dr. Chandre Gowda, I would say is illegal. There is no need for second enquiry. The law does not permit it.

3-30 P.M.

Therefore, the Government without any hesitation and without taking sides sh uld immediately agree for a judicial probe into the whole affair so that inquiry by the police and the Sub Divisianol Magistrate could be stopped. I think this is the most honourable course that is open to the Government if at all the Government is interested in protect the right and liberty of the individuals of this State. So far as Hon'ble Chief Minister in concerned he has as sumed office very recently and has proclaimed that no discrmination will be made and he will run the administration without any fear or favour. If the Hon'ble Chief Minister wants to adhere to his words ; if he wants to protect the interest of every citizen of this State he should immediately agree for judicial probe into this episode. Otherwise, we will have to draw inference that because he has to run the administration with the help of police department, he is some how soft pedling and attempting to protect them. Sir, I read in the newspaper a speech made by the Inspector General of Police of our State at Hubli. He said if everybody tries to correct the police, how could the Police take action ? Yes, I do agree and appreciate if the work done by the police is an appreciable one and according to law. Let us give all encouragement to the department. At the same time, if they take law into their hands and if they commit illegal acts thereby causing death of an individual citizen however bad or good he may be, how can we appreciate their service ? Therefore, I urge upon the Government to order for a judicial probe to know the entire truth of the incident that has taken place.

† ಶ್ರೀ ಜಿ. ಕೆ. ತಕ್ಕೇಡ್ (ಪರಸಗಡ್).—ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಪೋಸ್ಟ್ ಮಾರ್ಟಮ್ ರಿಪೋರ್ಟನ್ನು ಏನು ಓದಿ ಹೇಳಿದರು. ಆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಮುಖ್ಯವಾಗಿ ಮಾನ್ಯ ಬಸವಲಿಂಗಪ್ಪನವರು ಮಾನ್ಯ ಬೊಮ್ಮಾಯಿಯವರು ಹಾಗೂ ಮಾನ್ಯ ಲಕ್ಷ್ಮೀಸಾಗರ್‌ರವರು ಅದರ ಬಗ್ಗೆ ಹೇಳಿದ್ದಾರೆ. ಅದು ಈಗಾಗಲೇ ಪೋಲೀಸ್ ಸ್ಟೇಷನ್‌ನಲ್ಲಿ ಗುನ್ಹೆ ರಿಜಿಸ್ಟರ್ ಆಗಿದೆ. ನಮ್ಮ

ಭಾಗದಲ್ಲಿ ಗುನ್ಹೆ ಎಂದು ಹೇಳುತ್ತೇವೆ, ಈ ಕಡೆಯಲ್ಲಿ ಅಪರಾಧ ಎಂದು ಹೇಳುತ್ತಾರೆ. ಸಿ.ಆರ್.ಪಿ ಮತ್ತು ಐ.ಪಿ.ಸಿ. ಪ್ರಕಾರ ಈ ಕಟ್ಲೆ ಕೋರ್ಟು ಮುಂದೆ ಇದೆ. ಇತರ ಮಾನ್ಯ ಸದಸ್ಯರು ಈ ಸದನದಲ್ಲಿ..............

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾಧು ಕೊಲೆ ರಿಜಿಸ್ಟರ್ ಆಗಿಲ್ಲ.

ಶ್ರೀ ಜಿ.ಕೆ. ತಕ್ಕೇಡ್.—ಸ್ವಾಮಿ, ಮಾನ್ಯ ಸದಸ್ಯರು ಅವರು ಹೇಳಬೇಕಾದ್ದನ್ನು ಹೇಳಿದ್ದಾರೆ ಅದನ್ನು ನಾವು ಕೇಳಿದ್ದೇವೆ, ದಯಮಾಡಿ ನಾವು ಹೇಳುವುದನ್ನು ಅವರು ಕೇಳಲಿ...........

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಸದಸ್ಯರು ಈ ಕೇಸು ಕೋರ್ಟು ಮುಂದೆ ಇದೆ ಎಂದು ಹೇಳುವುದು ಸರಿಯಲ್ಲ. ಕೇಸ್ ಇನ್ನು ರಿಜಿಸ್ಟರ್ ಆಗಿಲ್ಲ...........

ಅಧ್ಯಕ್ಷರು.—ಮಾನ್ಯ ಸದಸ್ಯರು ಹೆಚ್ಚಿಗೆ ವಿಷಯ ಹೇಳುವುದಕ್ಕೆ ಹೋಗುವುದು ಬೇಡ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದವರು. ಅವರು ಏನು ಹೇಳಬೇಕೋ ಎಲ್ಲವನ್ನು ಹೇಳಿದ್ದಾರೆ; ಅದನ್ನು ನಾವು ಶಾಂತಿಯಿಂದ ಕುಳಿತು ಕೇಳಿದ್ದೇವೆ. ಮಾನ್ಯ ಲಕ್ಷ್ಮೀಸಾಗರ್‌ರವರು ಅವರದೇ ಆದ ಧಾಟಿಯಲ್ಲಿ ಹೇಳಿದ್ದಾರೆ ಮತ್ತೆ ಮಾನ್ಯ ಬೊಮ್ಮಾಯಿಯವರೂ ಕೂಡ ಏನು ಹೇಳಬೇಕೋ ಹೇಳಿದ್ದಾರೆ. ಅದೆಲ್ಲವನ್ನು ನಾವು ಶಾಂತಿಯಿಂದ ಕೇಳಿದ್ದೇವೆ. ಈಗ ಮಾನ್ಯ ಸದಸ್ಯರಾದ ತಕ್ಕೇಡ್‌ರವರು ಏನು ಹೇಳುತ್ತಾರೋ ಹೇಳಲಿ; ಅದನ್ನು ಕೇಳಿ ನಾವು ಉತ್ತರ ಕೊಡೋಣ.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ತಕ್ಕೇಡ್‌ರವರು ಕಟ್ಲೆ ಕೋರ್ಟಿಗೆ ಹೋಗಿದೆ ಎಂದು ಹೇಳಿದರು. ಆದರೆ ಆ ಪ್ರಕರಣ ಕೋರ್ಟಿನಲ್ಲಿ ಇಲ್ಲ. ಅದಕ್ಕೂ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದಾದರೆ ಹೇಳಲಿ.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೆ, ನಾನೂ ೨೫ ವರ್ಷಗಳಿಂದ ವಕೀಲಿ ಕೆಲಸ ಮಾಡಿದ್ದೇನೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಲಿ. ಈ ಕೇಸಿನಲ್ಲಿ ಇರುವಂತಾದ್ದು ಏನೆಂದರೆ, ಪೋಸ್ಟ್‌ಮಾರ್ಟಮ್ ಏನು ಮಾಡಿದ್ದಾರೆ ಎಂಬ ಇನ್‌ಫರ್‌ಮೇಷನ್ ಗೊತ್ತಾಗಿದೆ ಮತ್ತು ಯಾರು ಆರೋಪಿ ಎಂದು ಪೋಲೀಸರು ಎನ್‌ಕ್ವೈರಿ ಮಾಡುತ್ತಿದ್ದಾರೆ......

(ಈ ಸಂದರ್ಭದಲ್ಲಿ ನಾಲ್ಕಾರು ಮಂದಿ ಮಾನ್ಯ ಸದಸ್ಯರುಗಳು ಒಟ್ಟಿಗೇ ಎದ್ದು ನಿಂತು ಮಾತನಾಡಿದರು)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ದಯಮಾಡಿ ಕುಳಿತುಕೊಳ್ಳಬೇಕು; ಈ ರೀತಿ ಒಟ್ಟೊಟ್ಟಿಗೇ ನಿಂತುಕೊಂಡು ಮಾತನಾಡುವುದಕ್ಕೆ ಹೋಗಬಾರದು.

ಶ್ರೀ ಜಿ. ಕೆ. ತಕ್ಕೇಡ್.—ಅಧ್ಯಕ್ಷರೆ, ನನ್ನ ಅನೇಕ ಮಿತ್ರರು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ನಾವು ಯಾರು ಅವರಿಗೆ ಇಂಟರಪ್ಟ್ ಮಾಡಲಿಲ್ಲ. ನಮ್ಮ ಟ್ರೆಷರಿ ಬೆಂಚಿನವರಿಗೆ ಮತ್ತು ನನಗೂ ಕೇಸಿನ ವಿಚಾರ ಗೊತ್ತಿದೆ ಮತ್ತು ತಿಳಿಯುತ್ತದೆ. ನೀವೂ ವಕೀಲಿ ಕೆಲಸ ಮಾಡಿದ್ದೀರಿ ಮತ್ತು ನಾವೂ ಮಾಡಿದ್ದೇವೆ. ಇದು ಎಂತಹ ಮ್ಯಾಟರ್ ಆಗುತ್ತದೆ ಎಂಬುದು ನಮ್ಮ ಕಡೆಯವರಿಗೆ ಗೊತ್ತಿದೆ. ಪೋಲೀಸ್ ಸ್ಟೇಷನ್‌ನಲ್ಲಿ ಯಾರು ಸತ್ತಿದ್ದಾರೆ ಎಂಬ ಬಗ್ಗೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೭೬ರ ಪ್ರಕಾರ ಎಸ್.ಬಿ.ಎಂ. ಮಾಡಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಅದರಲ್ಲಿರುವುದನ್ನು ಓದಿ ಹೇಳಿದರು. ಪೋಲೀಸ್ ಸ್ಟೇಷನ್‌ನಲ್ಲಿ ಸತ್ತಿದ್ದಾರೆಂದಾಕ್ಷಣ ಪೋಲೀಸರ ಹೊಡೆತದಿಂದಲೇ ಸತ್ತಿದ್ದಾರೆಂದು ಹೇಳುವುದಕ್ಕೆ ಹೋಗಬಾರದು. ಸೆಲ್ಫ್ ಮೇಡ್ ಇಂಜುರೀಸ್ ಏತಕ್ಕೆ ಆಗಿರಬಾರದು? ಇದು ಬಹಳ ಗಂಭೀರವಾದ ವಿಚಾರ ಮತ್ತು ಪ್ರಶ್ನೆ. ನಾನು ಸುಮಾರು ೪–೫ ನೂರು ಕೇಸ್‌ಗಳಲ್ಲಿ ಅಪಿಯರ್ ಆಗಿದ್ದೇನೆ. ಇದು ನಮ್ಮ ಸ್ನೇಹಿತರಾದ ಬೊಮ್ಮಾಯಿಯವರಿಗೂ ಗೊತ್ತಿದೆ. ನಮ್ಮ ಹಿರಿಯ ವಕೀಲರಾದ ಬೊಮ್ಮಾಯಿಯವರು ಕೇಸ್ ನಡೆಸುವುದನ್ನು ನೋಡಿದ್ದೇನೆ. ಯಾರಾದರೂ ಪೋಲೀಸ್ ಸ್ಟೇಷನ್‌ನಲ್ಲಿ ಸತ್ತರೆಂದರೆ ಪೋಲೀಸರ ಹೊಡೆತದಿಂದಲೇ ಸತ್ತಿದ್ದಾರೆ ಎಂದು ಹೇಳುವುದು ಸಾಮಾನ್ಯವಾಗಿದೆ. ಉದಾಹರಣೆಗೆ, ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಕೇರಳದಲ್ಲಿ ಶ್ರೀ ರಾಜನ್‌ರವರು ಪೋಲೀಸ್ ಸ್ಟೇಷನ್‌ನಲ್ಲಿ

ಸತ್ತರು. ಇಲ್ಲಿ ಈ ಕೇಸಿನಲ್ಲಿ ಏನಿದೆ ಎಂದರೆ ಆ ಸಾಧು ಆರೋಪಿಯಾಗಿ ಕೋರ್ಟಿಗೆ ಬಂದಿದ್ದಾನೆ; ಪೋಲೀಸ್ ಸ್ಟೇಷನ್‌ನಲ್ಲಿ ಇನ್‌ವೆಸ್ಟಿಗೇಷನ್ ನಡೆದಿದೆ. ಚಾರ್ಜ್ ಷೀಟ್ ಹಾಕಿ ಫಸ್ಟ್ ಇನ್‌ಫರ್ ಮೇಷನ್ ಕಳುಹಿಸಿದ್ದಾರೆ. ಅವನು ಆರೋಪಿಯಾಗಿ ಪೋಲೀಸ್ ಸ್ಟೇಷನ್ನಿಗೆ ಬಂದಾಗ ಅವನ ಸ್ಥಿತಿ ಯಾವರೀತಿ ಇತ್ತು ಎಂಬುದು ಇನ್‌ಕ್ವೆಸ್ಟ್ ರಿಪೋರ್ಟಿನಲ್ಲಿ ಶ್ರೀಮತಿ ಲಕ್ಷ್ಮಮ್ಮನ ಹೇಳಿಕೆಯಿಂದ ಗೊತ್ತಾಗುತ್ತದೆ. ಆಕೆ ಈ ರೀತಿ ಹೇಳಿದ್ದಾರೆ: 'ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ಮೃತನನ್ನು ನೋಡಿದ್ದೇನೆ. ಮೃತನು ಈಗ್ಗೆ ಸುಮಾರು ೧೦ ವರ್ಷಗಳಿಂದ ಅಸ್ತಮ ಖಾಯಿಲೆಯಿಂದ ನರಳುತ್ತಿದ್ದನು; ಸದರಿ ಮೃತನನ್ನು ಈ ಖಾಯಿಲೆಗೋಸ್ಕರ ತುಳಸಿ ತೋಟದಲ್ಲಿರುವ ಡಾ॥ ಮುನಿ ಸ್ವಾಮಿ ಎಂಬುವರಿಂದ ಇಲಾಜು ನಡೆಸಿದ್ದೆವು, ಆದಾಗ್ಯೂ ಗುಣವಾಗಿರಲಿಲ್ಲ'' ಎಂದು ಕಳೆದ ೧೦ ವರ್ಷ ಗಳಿಂದ ಅವನು ಅಸ್ತಮದಿಂದ ನರಳುತ್ತಿರುವಾಗ ಆತನ ಪರಿಸ್ಥಿತಿ ಯಾವ ಗಳಿಗೆಯಲ್ಲಿ ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಬಹಳ ತೀವ್ರಗತಿಯಿಂದ ಮತ್ತು ಪ್ರಾಮಾಣಿಕ ರೀತಿಯಿಂದ ಇನ್‌ವೆಸ್ಟಿಗೇಷನ್ ಮಾಡಿದ್ದಾರೆ. ಮಾನ್ಯ ಮಂತ್ರಿಗಳಾಗಲೀ, ಸರ್ಕಾರವಾಗಲೀ, ಮಾನ್ಯ ಸದಸ್ಯರಾಗಲೀ ಪ್ರಾಮಾಣಿಕ ರೀತಿಯಿಂದ ಆಗುವಂತಹ ಇನ್‌ವೆಸ್ಟಿಗೇಷನ್ ಅನ್ನು ತಡೆಯಬೇಕೆಂದಿಲ್ಲ ಇವೊತ್ತು ಜನತೆಯ ಆಸ್ತಿ ಮತ್ತು ಜನಗಳ ಜೀವವನ್ನು ರಕ್ಷಣೆ ಮಾಡುವ ಪೋಲೀಸರ ಬಗ್ಗೆ ಹಾಗೂ ಸಿ.ಆರ್.ಸಿ. ಪಿ.ಸಿ. ಮತ್ತು ಐ.ಪಿ.ಸಿ. ಇವುಗಳನ್ನು ಪವಿತ್ರವಾದ ರೀತಿಯಿಂದ ಅನುಷ್ಠಾನಕ್ಕೆ ತರುವಂತಹ ಅಧಿಕಾರಿ ಗಳ ಬಗ್ಗೆ ತಾವು ಸಂಶಯ ಪಡುತ್ತಿದ್ದೀರಿ; ಅವರ ಮೇಲೆ ಆರೋಪ ಹೊರಿಸಬೇಕು ಎಂದು ಪ್ರಯತ್ನ ಮಾಡುತ್ತಿದ್ದೀರಿ. ಇವೊತ್ತು ಈ ಸದನದ ಮುಖಾಂತರ ಪೋಲೀಸರ ಮತ್ತು ಸರ್ಕಾರದ ವಿರುದ್ಧ ಆರೋಪವನ್ನು ಸಿದ್ಧ ಮಾಡುವುದಕ್ಕೆ ಹೊರಟಿದ್ದಾರೆ. ಇದು ನ್ಯಾಯ ಸಮ್ಮತವಲ್ಲ. ಆರೋಪ ಇದೆಯೋ ಇಲ್ಲವೋ ಗೊತ್ತಿಲ್ಲ; ಆದರೂ ಈಗಾಗಲೇ ಸಂಬಂಧಪಟ್ಟ ಸರ್ಕಲ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದಾರೆ. ಆದರೆ ಈ ಘಟನೆಯ ಬಗ್ಗೆ, ಈ ಪ್ರಕರಣದ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡ ಬೇಕು ಎಂಬ ಮಾನ್ಯ ವಿರೋಧ ಪಕ್ಷದವರ ಅಭಿಪ್ರಾಯ ಏನಿದೆ ಅದು ಪೋಲೀಸ್ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂಬ ಭಾವನೆಯಿಂದ ಹೊರಟಿದ್ದಾರೆಂಬುದನ್ನು ಸೂಚಿಸುತ್ತದೆ. ಪೋಲೀಸಿನವರೇ ಆತನನ್ನು ಹೊಡೆದು ಕೊಂದರು, ಮತ್ತು ಪೋಲೀಸ್ ಆಡಳಿತ ಸರಿಯಾಗಿಲ್ಲ ಎಂದು ವಿರೋಧ ಪಕ್ಷದವರು ನಿನ್ನೆ ಸರ್ಕಾರದ ಮೇಲೆ ಆರೋಪ ಮಾಡಿದರು; ಇದು ಯೋಗ್ಯವಲ್ಲ. ಶ್ರೀಮಾನ್ ಬಸವಲಿಂಗಪ್ಪನವರು "injuries caused by blunted hard instruments." ಎಂದು ಹೇಳಿದರು. ಆದರೆ ಅದು ಷಾರ್ಟ್‌ಕಟ್ ಇಂಜುರೀಸ್ ಅಲ್ಲವೆಂದು ನಾನು ನನ್ನ ಅನುಭವದಿಂದ ಹೇಳು ತ್ತೇನೆ. ಕ್ರಿಮಿನಲ್ ಕೇಸಿನಲ್ಲಿ ಆರೋಪಣೆಗಳು ಯಾವರೀತಿ ಬರುತ್ತವೆಂದರೆ, ಇಂಜುರೀಸ್ ಮಾಡುವು ದಕ್ಕೆ ಕೆಲವು ಮಾರ್ಗಗಳು ಇವೆ. ಅವು ಯಾವುವೆಂದರೆ, Fatal injury, short cut injury by hard blunt substance ಎಂದು. ಗಾಯಗಳನ್ನು ಸಹಜವಾಗಿ ಮಾಡಿಕೊಂಡು ಸಾಯ ಬಹುದು. ಆ ಮನುಷ್ಯ ಸುಮಾರು ೨೭ ವರ್ಷಗಳಿಂದ ಮಂತ್ರವಾದಿಯಾಗಿದ್ದಾನೆ. ಆದ್ದರಿಂದ ಮಂತ್ರ ಶಕ್ತಿಯಿಂದ ಅವನೇ ಏತಕ್ಕೆ ಗಾಯಗಳನ್ನು ಮಾಡಿಕೊಂಡಿರಬಾರದು ಎಂದು ನಾನು ಕೇಳುತ್ತೇನೆ. ಮಂತ್ರವಾದಿಗಳು ತಾವೇ ಗಾಯ ಮಾಡಿಕೊಂಡಿರತಕ್ಕ ಉದಾಹರಣೆಗಳು ಬೇಕಾದಷ್ಟು ಇವೆ. ತಾವೇ ಗಾಯ ಮಾಡಿಕೊಂಡು ಎರಡನೆಯವರು ಗಾಯ ಮಾಡಿದ್ದಾರೆ ಎಂದು ಹೇಳಿರುವಂತಹ ಉದಾಹರಣೆಗಳು ನಮ್ಮ ದೇಶದಲ್ಲಿ ಇವೆ. ಅದೇ ತರಹ ಇದೂ ಏಕೆ ನಡೆದಿರಬಾರದು ? ಒಂದು ವೇಳೆ ಪೋಲೀಸ್ ಅಧಿ ಕಾರಿಗಳು ಗಾಯ ಮಾಡಿದ್ದಾರೆ ಎನ್ನುವುದಕ್ಕೆ 'ಐ' ವಿಟ್‌ನೆಸ್ ಇದೆಯೇ ? ಎವಿಡೆನ್ಸ್ ಇದೆಯೇ ? ಯಾವ ಎವಿಡೆನ್ಸ್ ಪ್ರಕಾರ ಪೋಲೀಸ್ ಅಧಿಕಾರಿಗಳು ಆರೋಪಿಯಾಗಿದ್ದಾರೆ ಎಂದು ಸಿದ್ಧ ಮಾಡು ತ್ತೀರಿ ? ಡಾಕ್ಟರು ಕೊಟ್ಟಿರತಕ್ಕ ಪೋಸ್ಟ್ ಮಾರ್ಟಮ್ ರಿಪೋರ್ಟಿಗೂ ಮತ್ತು ಮ್ಯಾಜಿಸ್ಟ್ರೇಟ್‌ರವರ ರಿಪೋರ್ಟಿಗೂ ಒಂದಕ್ಕೊಂದಕ್ಕೆ ಕಾಂಟ್ರಡಿಕ್ಟರಿಯಾಗಿರಬಹುದು, ಒಂದೊಂದರಲ್ಲೂ ಪರಸ್ಪರ ವಿರುದ್ಧ ವಾದ ಸಂಗತಿಗಳನ್ನು ಕೊಟ್ಟಿರಬಹುದು. ಮನುಷ್ಯ ಮೃತನಾದ ೨೪ ತಾಸುಗಳ ನಂತರ ಡೆಡ್ ಬಾಡಿ ಯಲ್ಲಿ ಕೆಲವು ಬದಲಾವಣೆಗಳು ಆಗುವ ಸಂಭವವೂ ಉಂಟು.

ಅಧ್ಯಕ್ಷರು —ಒಬ್ಬರು ಮಾನ್ಯ ಸದಸ್ಯರು ಇಷ್ಟೊಂದು ವೇಳೆಯನ್ನು ತೆಗೆದುಕೊಂಡರೆ ಹೇಗೆ ?

ಶ್ರೀ ಜಿ. ಕೆ. ತಕ್ಕೇಡ್.— ಇದು ಬಹಳ ಪ್ರಾಮುಖ್ಯವಾದ ವಿಷಯ. ಗಾಯಗಳದ್ದು ಬಹಳ ಮಹತ್ವವಾದ ವಿಷಯ. ಆದ್ದರಿಂದ ನಾನು ಅದನ್ನು ಈ ಸದನದ ಮುಂದೆ ಇಡುತ್ತಿದ್ದೇನೆ ಇನ್ನು ಕೆಲವೇ ನಿಮಿಷಗಳಲ್ಲಿ ನಾನು ಇದನ್ನು ಮುಕ್ತಾಯ ಮಾಡುತ್ತೇನೆ. ಇವೊತ್ತು ಯಾರೇ ಪಂಚನಾಮೆ

ರಿಪೋರ್ಟ್ ಕೊಡಲಿ ಅದರ ಮೇಲೆ ಆರೋಪಣೆ ಮಾಡಬಹುದು. ಏಕೆಂದರೆ, ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್ ಡೆಡ್ ಬಾಡಿಯನ್ನು ನೋಡುವ ಕಾಲಕ್ಕೆ ಹಾರ್ಡ್ ಬ್ಲಂಟ್ ಸಬ್‌ಸ್ಟೆನ್ಸ್ ಆದಂತಹ ಗಾಯುಗಳು ಕಾಣಿಸುವುದಕ್ಕೆ ಆಗುವುದಿಲ್ಲ. ಆ ಮನುಷ್ಯ ಏನಾದರೂ ಸ್ವತಃ ಆತ್ಮಹತ್ಯೆ ಮಾಡಿಕೊಂಡಿರಬಹುದು. ಕೆಲವರು ತಮ್ಮ ತಲೆಯನ್ನು ಗೋಡೆಗೆ ಹೊಡೆದುಕೊಳ್ಳುತ್ತಾರೆ. ತಮ್ಮ ಕೈಯಲ್ಲೇ ತಾವು ಪ್ರಾಣ ಬಿಡಬೇಕೆಂದು ಬಹಿರಂಗ ಬಲಿ ತೆಗೆದುಕೊಳ್ಳುತ್ತಾರೆ. ಅಂಥಾ ಕೆಲವು ಘಟನೆಗಳು ನಡೆದಿವೆ. ಅದೇ ರೀತಿ ಇದೂ ಆಗಿರಬಹುದು. ಪ್ರಾಣತ್ಯಾಗ ಮಾಡಿ ದೇಹವನ್ನು ಬಿಟ್ಟು ಪರಲೋಕಕ್ಕೆ ಹೋಗುತ್ತಾರೆ ಹಾರ್ಡ್ ಬ್ಲಂಟ್ ಸಬ್‌ಸ್ಟೆನ್ಸ್ ಇಂಜುರೀಸ್ ಆಗಿದ್ದರೆ ಅವರ ಹತ್ತಿರ ಚಾಕು ಚೂರಿ ಇದ್ದಿರಬಹುದು. ಅದರಿಂದ ಅವರು ಸ್ವತಃ ಗಾಯ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡರೆ ಅದಕ್ಕೆ ಪೋಲೀಸಿನವರು ಹೊಣೆಯೇ? ಪೋಸ್ಟ್‌ಮಾರ್ಟಮ್ ರಿಪೋರ್ಟ್‌ನಲ್ಲೇ ಆಗಲೀ, ಪಂಚನಾಮೆ ರಿಪೋರ್ಟ್‌ನಲ್ಲೇ ಆಗಲೀ ಪೋಲೀಸಿನವರೇ ಆ ವ್ಯಕ್ತಿಯನ್ನು ಹೊಡೆದು ಸಾಯಿಸಿದ್ದಾರೆ ಎಂದು ಎಲ್ಲಿಯೂ ತೋರಿಸುವುದಿಲ್ಲ. ಈ ಕೇಸಿನ ಬಗ್ಗೆ ಫಸ್ಟ್ ಇನ್‌ಫರ್‌ಮೇಷನ್ ರಿಪೋರ್ಟನ್ನು ಪೋಲೀಸಿನವರು ಕೋರ್ಟಿಗೆ ಕೊಟ್ಟಿದ್ದಾರೆ. ಅದನ್ನು ಸರ್ಕಾರಕ್ಕೆ ಬಿಡಿ, ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಯೋಗ್ಯ ರೀತಿಯಿಂದ ಇನ್‌ವೆಸ್ಟಿಗೇಷನ್ ಮಾಡಿಸುತ್ತಾರೆ. ಈ ಕೇಸನ್ನು ಯಾವ ರೀತಿಯಿಂದ ನಡೆಸಬೇಕು, ಯಾವರೀತಿ ಇನ್‌ವೆಸ್ಟಿಗೇಟ್ ಮಾಡಬೇಕು ಎನ್ನುವಂಥಾದ್ದನ್ನು ಸರ್ಕಾರ ಪ್ರಾಮಾಣಿಕವಾಗಿ ಮಾಡುತ್ತದೆ. ಪೋಲೀಸರು ಏನೋ ಮಾಡಿದ್ದಾರೆ ಎಂದು ಅವರ ಮೇಲೆ ಸಂಶಯ ಪಟ್ಟು ಸರ್ಕಾರದಲ್ಲಿ ಇರುವಂತಹ ಅಧಿಕಾರಿಗಳ ಮೇಲೆ ಆಗಲೀ, ಪೋಲೀಸ್ ಅಧಿಕಾರಿಗಳ ಮೇಲಾಗಲೀ ಈ ರೀತಿ ವಿರೋಧ ಪಕ್ಷದ ಮಿತ್ರರು ಆರೋಪಣೆ ಮಾಡಿ ಇಡೀ ರಾಜ್ಯದೊಳಗೆ ಪೋಲೀಸರ ಒಂದು ಪ್ರಭುತ್ವಕ್ಕೆ ಮತ್ತು ಅವರ ಒಂದು ದಕ್ಷತೆಗೆ ಕುಂದು ತಗಲುವಂತೆ ಮಾಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಟ್ಟಿನಲ್ಲಿ, ಸರ್ಕಾರ ಈ ಕೇಸನ್ನು ನ್ಯಾಯ ರೀತಿಯಿಂದ ಇನ್‌ವೆಸ್ಟಿಗೇಟ್ ಮಾಡುತ್ತದೆ ಎಂದು ನಾನು ಅಧ್ಯಕ್ಷರ ಮುಖಾಂತರ ಬಿನ್ನಹ ಮಾಡುತ್ತೇನೆ.

ಅಧ್ಯಕ್ಷರು —ಈ ವಿಚಾರದಲ್ಲಿ ಸರ್ಕಾರದವರು ಎರಡು ವರದಿಗಳನ್ನು ತಮ್ಮ ಮುಂದಿಟ್ಟಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಕೇಳತಕ್ಕದ್ದು ಸರಿ. ಅದು ಬಿಟ್ಟು ಭಾಷಣ ಮಾಡಿದರೆ ಹೇಗೆ ? ಇಂದಿನ ಅಜೆಂಡಾ ಪ್ರಕಾರ ನಾವು ಕೆಲಸ ಮಾಡಬೇಕಾಗಿದೆ. ಮಾನ್ಯ ಮಂತ್ರಿಗಳಿಗೆ ಸ್ಪಷ್ಟೀಕರಣ ಕೇಳಿ ಏನು ನಿರ್ಣಯ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇದರ ಬಗ್ಗೆ ಮತ್ತೆ ಭಾಷಣ ಮಾಡುವ ಅಗತ್ಯವಿಲ್ಲ. ಈ ನಿಲುವಳಿ ಸೂಚನೆಯ ಬಗ್ಗೆ ಎರಡು ಮೂರು ದಿವಸಗಳಿಂದಲೂ ಇಲ್ಲಿ ಚರ್ಚೆಯಾಗುತ್ತಿದೆ. ಇದಕ್ಕೆ ನಾನು ನನ್ನ ಕನ್‌ಸೆಂಟನ್ನು ಡಿನೇ ಮಾಡಿದ್ದೇನೆ ಆದ್ದರಿಂದ ಮತ್ತೆ ಈ ಮನೆಯ ಸಮಯವನ್ನು ತಾವು ವ್ಯಯ ಮಾಡದೆ, ಸಾರ್ಥಕಗೊಳಿಸಿ ಕೊಳ್ಳಬೇಕು.

† ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೇ, ಈಗತಾನೇ ಮಾತನಾಡಿದಂತಹ ವಕೀಲ ಮಿತ್ರರು ನಮ್ಮ ಮುಂದಿರತಕ್ಕ ಸಮಸ್ಯೆಯನ್ನು ಕಾನೂನು ದೃಷ್ಟಿಯಿಂದ ಎಳೆಎಳೆಯಾಗಿ ಬಿಡಿಸಿದ್ದಾರೆ. ನಾನು ವಕೀಲನಲ್ಲ ನಾನು ಸಾಮಾನ್ಯ ವ್ಯಕ್ತಿಯಾಗಿ ಈ ಸಮಸ್ಯೆಯನ್ನು ಹೇಗೆ ನೋಡುತ್ತಿದ್ದೇನೆಂಬುದಕ್ಕೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಸಮಸ್ಯೆ ಹೊರ ನೋಟಕ್ಕೆ ಕಾಣುವ ಹಾಗೆ ಇದು ಕೇವಲ ಕಾನೂನಿನ ಮಟ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ಇವತ್ತು ಸಾಧುವಿನ ಕೊಲೆಯಾಗಿದೆಯೇ ಅಥವಾ ಅವನು ಸತ್ತುಹೋಗಿದ್ದಾನೆಯೇ ಎನ್ನುವುದರ ಬಗ್ಗೆ ಸರ್ಕಾರದವರು ವರದಿಯನ್ನು ಇಟ್ಟಿದ್ದಾರೆ. ಸರ್ಕಾರದವರು ಕೊಟ್ಟಂಥ ವಿವರಗಳ ಹಿಂದುಗಡೆಯಿಂದ ಅನೇಕ ವಿಧವಾದ ಗಂಭೀರ ಪ್ರಶ್ನೆಗಳು ಉದ್ಭವವಾಗಿದೆ. ಈ ಪ್ರಶ್ನೆ ಮೊಟ್ಟಮೊದಲನೆಯದಾಗಿ ಪತ್ರಿಕೆಗಳಲ್ಲಿ ಬಂದಾಗ ಇಡೀ ಕರ್ನಾಟಕ ರಾಜ್ಯದಲ್ಲಿ ಅದರಲ್ಲಿಯೂ ಬೆಂಗಳೂರು ನಗರದಲ್ಲಿ ಒಂದು ದೃಷ್ಟಿಯಿಂದ ಭಯ, ಇನ್ನೊಂದು ದೃಷ್ಟಿಯಿಂದ ಹಾಹಾಕಾರ ವಾತಾವರಣ ನಿರ್ಮಾಣವಾಯಿತು. ಮೊದಲು ಪತ್ರಿಕೆಯಲ್ಲಿ ಈ ವಿಷಯ ಬಂದ ಹಾಗೆ ಸಾಧುವನ್ನು ಅರೆಸ್ಟ್ ಮಾಡಿದರು. ಅವನು ಮಕ್ಕಳನ್ನು ಕೊಲೆ ಮಾಡುತ್ತಿದ್ದ. ಮಕ್ಕಳ ಕತ್ತಿನ ರಕ್ತವನ್ನು ಕಾಳಿಕಾದೇವಿಗೆ ತರ್ಪಣ ಮಾಡುತ್ತಿದ್ದ ಎಂದು ನಾವೆಲ್ಲರೂ ತಿಳಿದಿದ್ದೇವೆ. ದುರಾದೃಷ್ಟ ವಶಾತ್, ಈ ಘಟನೆ ನನ್ನ ಕ್ಷೇತ್ರವಾದ ಹರಿಶ್ಚಂದ್ರ ಘಾಟ್‌ನಲ್ಲಿ ನಡೆದಿದೆ ಆ ಸಾಧು ಅನೇಕ ವರ್ಷಗಳಿಂದ ಇಂಥ ಚಟುವಟಿಕೆಯಲ್ಲಿ ತೊಡಗಿದುದರಿಂದ ಈ ವಿಷಯ ಪತ್ರಿಕೆಯಲ್ಲಿ ಬಂದಾಗ ಅಲ್ಲಿಯ ಜನರು ಪೋಲೀಸರಿಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸಿದರು. ಇನ್ನು ಮೇಲೆ ನಮ್ಮ ಮಕ್ಕಳು ರಸ್ತೆಯಲ್ಲಿ ಸುರಕ್ಷಿತವಾಗಿ ಓಡಾಡಬಹುದು, ಮೂಲ, ಅಪರಾಧಿಯನ್ನು

ಪೋಲೀಸರು ಹಿಡಿದು ಬಿಟ್ಟರು, ಇದು ಸ್ತುತ್ಯವಾದಕಾರ್ಯ ಎಂದು ಜನ ಅಭಿನಂದನೆಯನ್ನು ಸಲ್ಲಿಸಿದರು. ಪೋಲೀಸರು ಮಾಡಿರುವ ಈ ಒಂದು ಕಾರ್ಯಕ್ಕೆ ಅಭಿನಂದನೆಯನ್ನು ನಾವು ಅಗತ್ಯವಾಗಿ ಸಲ್ಲಿಸಬೇಕಾಗಿದೆ. ತದನಂತರ ಘಟನೆಗಳು ಏನು ನಡೆದಿದೆ ಅವುಗಳ ಮೂಲಕ್ಕೆ ಹೋಗಿ ನಾವು ನೋಡಿದಾಗ, ತಮಿಳು ಸಿನಿಮಾ ನೋಡಿಕೊಂಡು ಬಂದು ಮಕ್ಕಳ ಮೇಲೆ ಅತ್ಯಾಚಾರ ನಡೆಸುವುದಕ್ಕೋಸ್ಕರ ಮಕ್ಕಳ ಕೊಲೆ ಮಾಡತಕ್ಕದ್ದು ಎಂದು ಈ ಸದನದಲ್ಲಿ ಸರ್ಕಾರದವರು ವರದಿಯನ್ನು ಕೊಟ್ಟಿದ್ದರು ಈಗ ಆ ಸಾಧು ಮಕ್ಕಳ ರಕ್ತವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಇಂಥ ಕೊಲೆಗಳನ್ನು ಮಾಡಿದ್ದಾನೆ ಎನ್ನುವುದು ವರದಿಯಲ್ಲಿದೆ ಈ ರೀತಿಯಲ್ಲಿ ಒಂದು ಘಟನೆಗೆ ಎರಡು ರೀತಿಯ ವರದಿಗಳು ಇವೆ. ಇದಕ್ಕೆ ಕಾರಣ ಏನು ? ನಿಜ ಸ್ಥಿತಿಯನ್ನು ತಾವು ಹೇಗೆ ಕಂಡುಹಿಡಿಯುತ್ತೀರಿ ?

ಇನ್ನೊಂದು ಘಟನೆಯಲ್ಲಿ ಪ್ರಧಾನ ಅಪರಾಧಿ ಯಾರಿದ್ದಾರೆ ಆತ ಸನ್ಯಾಸಿ, ಆತ ಈಗ ಹೊರಟು ಹೋಗಿದ್ದಾನೆ, ಅಥವಾ ಹೋಗುವ ಹಾಗೆ ಮಾಡಿದ್ದಾರೆ. ಇದು ಮೂಲ ಪ್ರಶ್ನೆ ಇದನ್ನು ಕಂಡುಹಿಡಿಯುವುದು ಹೇಗೆ ? ಇದರ ಬಗ್ಗೆ ರಾಜಾಜಿನಗರದಲ್ಲಿ ಜನರು ಏನೇನು ಮಾತನಾಡಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಸರ್ಕಾರಕ್ಕೆ ಹೇಳುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಪೋಲೀಸರು ಸಾಧುವನ್ನು ಹೊಡೆದು ಕೊಂದಿದ್ದಾರೆ ಎಂದು ನಾನು ಹೇಳಿದರೆ ಅದು ಬೇಜವಾಬ್ದಾರಿಯ ಹೇಳಿಕೆಯಾಗುತ್ತದೆ. ಇದಕ್ಕೆ ಸರ್ಕಾರದವರೇ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ ಆ ಸಾಧುವಿನ ಹತ್ತಿರ ಅಪಾರವಾದ ಹಣ ಮತ್ತು ಬಂಗಾರ ಇತ್ತು ಎಂದು ಜನರು ಹೇಳುತ್ತಿದ್ದಾರೆ ಸುಮಾರು ೧೪-೧೫ ವರ್ಷಗಳಿಂದ ಆ ಸಾಧು ಈ ವಾಮಾಚಾರದಲ್ಲಿ, ಭೂತ ಪ್ರೇತಗಳನ್ನು ಬಿಡಿಸುತ್ತಿದ್ದ ಎಂದು ಅನೇಕರು ಹೇಳುತ್ತಿದ್ದಾರೆ. ಆ ಸಾಧುವಿನ ಹತ್ತಿರ ಇದ್ದ ಹಣ-ಬಂಗಾರವನ್ನೇನಾದರೂ ಪೋಲೀಸರು ವಶಪಡಿಸಿಕೊಂಡಿದ್ದಾರೆಯೇ ? ಆತ ಅನೇಕ ಕಾಳಿ ವಿಗ್ರಹಗಳನ್ನು ಇಟ್ಟುಕೊಂಡಿದ್ದನೆಂದು ಕೇಳಿದ್ದೇವೆ. ಅವುಗಳನ್ನು ಪೋಲೀಸರು ವಶ ಮಾಡಿಕೊಂಡಿದ್ದಾರೆಯೇ ? ಪೋಲೀಸರಿಗೆ ಸಾಧುವಿನ ಹತ್ತಿರ ಬೇಕಾದಷ್ಟು ಹಣ ಸಿಕ್ಕಿತು, ಬಂಗಾರ ಸಿಕ್ಕಿತು, ಅದನ್ನು ಉಳಿಸಿಕೊಳ್ಳುವುದಕ್ಕೆ ಆ ಸಾಧುವನ್ನು ಮುಗಿಸಿದರು ಎಂದು ಇನ್ನೊಂದು ವಾದ ಇದೆ, ಜನಗಳಿಂದ ಬಂದಂಥ ಸುದ್ದಿಯನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ತಾವು ಸದನಕ್ಕೆ ಸೂಕ್ತ ವರದಿಯನ್ನು ಕೊಡಬೇಕು. ಪೋಲೀಸರು ಸಾಧುವನ್ನು ಅರೆಸ್ಟ್ ಮಾಡಿದಾಗ ಅವನ ಜೊತೆಯಲ್ಲಿ ಅವನ ಸಹೋದ್ಯೋಗಿಗಳನ್ನು ಅರೆಸ್ಟ್ ಮಾಡಿದರು. ಆಗ ಅವನ ಹತ್ತಿರ ಯಾವ ಯಾವ ವಸ್ತುಗಳಿದ್ದವೋ ಅವುಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆಯೇ ? ಅವನಲ್ಲಿದ್ದ ವಿಗ್ರಹಗಳು ಏನಾದರೂ ಸಿಕ್ಕಿವೆಯೆ ?

ಇನ್ನೊಂದು ಸುದ್ದಿ ಏನೆಂದರೆ, ಅನೇಕ ದೊಡ್ಡದೊಡ್ಡ ವ್ಯಕ್ತಿಗಳು ಇದರ ಹಿಂದುಗಡೆ ಇದ್ದರು ಎನ್ನುವುದು ಪ್ರಚಲಿತವಾಗಿದೆ. ಇದು ಊಹಾಪೋಹ ಇರಬಹುದು. ಸತ್ತಂಥ ವ್ಯಕ್ತಿ ಇದ್ದಿದ್ದರೆ ಇದೆಲ್ಲಾ ಹೊರಬರುತ್ತಿತ್ತು. ಅದರೆ ಮೂಲತ: ಆ ವ್ಯಕ್ತಿಯನ್ನು ಮುಗಿಸಿದ್ದಾರೆ. ಇನ್ನೂ ಕೆಲವರು ಆ ಸಾಧು ಸ್ಮಶಾನದಿಂದ ಆಕಾಶಕ್ಕೆ ತಕ್ಷಣ ಮಾಯವಾಗಿ ಹೋಗಿ ಎಂದು ಅಲ್ಲಿ ಜನಗಳ ಜಾತ್ರೆಯೇ ಸೇರಿತ್ತು ಎಂದು ಅವನ ಯೋಗ ಶಕ್ತಿಯಿಂದ ಆ ರೀತಿ ಹೋದರೂ ಹೋಗಿರಬಹುದೆಂದು ಹೇಳುತ್ತಿದ್ದಾರೆ. ಈ ವಿಷಯ ಮಾನ್ಯ ತಕ್ಕೇಡ್ ಅವರಿಗೆ ಚೆನ್ನಾಗಿ ಗೊತ್ತು. ಆ ಸಾಧುವಿನ ಹಿಂದುಗಡೆ ಅನೇಕ ಜನ ಗಣ್ಯ ವ್ಯಕ್ತಿಗಳು ಇದ್ದರಂತೆ ಆದರೆ ಅವರು ಏಕೆ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆತ ಬಂಗಾರವನ್ನು ತಯಾರು ಮಾಡುತ್ತಿದ್ದ ಎಂದು ಕೆಲವರು ಹೇಳುತ್ತಾರೆ. ಹಣವಂತರೆಲ್ಲರೂ ಆತನ ಜೊತೆಯಲ್ಲಿದ್ದರು ಎಂದು ಪತ್ರಿಕೆಗಳಲ್ಲಿ ಬಂದಿದೆ. ಇದಲ್ಲದೆ ಆ ಸಾಧು ವಶೀಕರಣ ಮಾಡುವುದಕ್ಕೆ ಬೂದಿ ಹಾಕುತ್ತಿದ್ದ ಅದನ್ನು ಮಗುವಿನ ಮೇಲೆ ಹಾಕಿದರೆ ಆ ಮಗು ಹೇಳಿದ ಹಾಗೆ ಕೇಳುತ್ತದೆ. ಆಗ ಕತ್ತನ್ನು ಕುಯ್ದು ರಕ್ತವನ್ನು ತೆಗೆದುಕೊಳ್ಳುತ್ತಿದ್ದ ಮತ್ತು ಆ ರಕ್ತದಿಂದ ಕಾಳಿಕಾ ದೇವಿ ಪೂಜೆ ಮಾಡುತ್ತಿದ್ದ ಎಂದು ಬಂದಿದೆ. ಅನೇಕ ವ್ಯಕ್ತಿಗಳು ಆತನ ಹಿಂದುಗಡೆ ಇದ್ದರೇ, ಮತ್ತು ಈ ವಾಮಚಾರಕ್ಕೆ ಮಕ್ಕಳ ರಕ್ತವನ್ನು ಉಪಯೋಗಿಸುತ್ತಿದ್ದನೇ ಎನ್ನುವುದು ಯಾರಿಗೆ ಗೊತ್ತು?

೪-೦೦ ಪಿ. ಎಂ.

ಈ ಪ್ರಕರಣದ ಹಿಂದೆ ಯಾರು ಯಾರು ಇದ್ದಾರೆ ಎಂಬುದೆಲ್ಲಾ ಹೊರಗಡೆ ಬರಬೇಕಾಗಿದೆ. ಆದ ಕಾರಣ ನ್ಯಾಯಾಂಗ ತನಿಖೆಯಾಗಬೇಕೆಂದು ನಾನು ಹೇಳುತ್ತಿದ್ದೇನೆ. ಆ ಸಾಧು ಪೋಲೀಸರ ವಶದಲ್ಲಿದ್ದಾಗ ಮರಣ ಹೊಂದಿದ ಕಾರಣ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಮ್ಮ ಕಡೆಯಿಂದ ಒಂದು

ಬೇಡಿಕೆ ಇದೆ. ಆದರೆ ನನ್ನ ಪ್ರಕಾರ ಇದು ಇಷ್ಟಕ್ಕೆ ಸೀಮಿತವಾಗಬಾರದು; ಇಡೀ ಪ್ರಕರಣದ ಬಗ್ಗೆಯೇ ನ್ಯಾಯಾಂಗ ತನಿಖೆಯಾಗಬೇಕು ಇಡೀ ಪ್ರಕರಣವೆಂದರೆ, ಮಕ್ಕಳ ಕೊಲೆಗೆ ಕಾರಣರು ಯಾರು, ಆ ಸಾಧುವಿನ ಬಳಿ ಇದ್ದಂಥ ಹಣ ಎಲ್ಲಿ ಹೋಯಿತು, ಆತನ ಜೊತೆಯಲ್ಲಿದ್ದ ಗಣ್ಯ ವ್ಯಕ್ತಿಗಳು ಯಾರು ಎಂಬ ಬಗ್ಗೆ ಅಮೂಲಾಗ್ರವಾದಂಥ, ಸಮಗ್ರವಾದಂಥ ತನಿಖೆಯಾಗಬೇಕೆಂಬುದೇ ನನ್ನ ಬೇಡಿಕೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸಾಧು ಸಾಯುವುದಕ್ಕೆ ಕಾರಣಕರ್ತರಾದ ಪೋಲೀಸರಿಗೆ ಶಿಕ್ಷೆ ವಿಧಿಸಬಹುದು ಇಲ್ಲವೆ ಜೈಲಿಗೆ ಹಾಕಬಹುದು, ಇಷ್ಟು ಮಾಡುವುದರಿಂದಲೇ ಸಾರ್ವಜನಿಕರಲ್ಲಿರ ತಕ್ಕಂಥ ಭೀತಿ ನಿವಾರಣೆಯಾಗುವುದಿಲ್ಲ. ಮತ್ತು ಸರ್ಕಾರ ತನ್ನ ಕರ್ತವ್ಯವನ್ನು ಪೂರ್ತಿ ಮಾಡಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ ಕಾರಣ ನಾನು ಮೊದಲೇ ಹೇಳಿದಂತೆ ಮಕ್ಕಳನ್ನು ಕೊಲೆ ಮಾಡುತ್ತಿದ್ದವರು ಯಾರು ಎಂಬುದನ್ನು ಕಂಡು ಹಿಡಿಯಬೇಕು, ಆ ಸಾಧುವಿನ ಬಳಿ ಇದ್ದಂಥ ಹಣವನ್ನು ಯಾರು ತೆಗೆದುಕೊಂಡರು ಮತ್ತು ಆತನ ಹತ್ತಿರ ಹೋಗುತ್ತಿದ್ದ ದೊಡ್ಡ ವ್ಯಕ್ತಿಗಳು ಯಾರು ಯಾರು ಎಂಬುದೆಲ್ಲಾ ಪತ್ತೆ ಮಾಡಬೇಕು. ಒಟ್ಟಿನಲ್ಲಿ ಸಮಗ್ರವಾದಂಥ ತನಿಖೆಯಾಗಬೇಕೆಂದು ಹೇಳುತ್ತೇನೆ. ಇಲ್ಲಿ ಪೋಲಿಸರ ವರ್ತನೆಯ ಬಗ್ಗೆ ನನಗೆ ಅನುಮಾನವೇ ಇಲ್ಲ. ತುರ್ತು ಪರಿಸ್ಥಿತಿ ಈ ದೇಶದಲ್ಲಿ ಜಾರಿಯಲ್ಲಿದ್ದಾಗ ಪೋಲೀಸರ ಅಮಾನುಷ ಕೃತ್ಯಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ಸಹ ಆ ಸಮಯದಲ್ಲಿ ಜೈಲಿನಲ್ಲಿ ಇದ್ದೆ. ಆ ಒಂದು ಅನುಭವದಿಂದ ಹೇಳಬೇಕೆಂದರೆ, ಒಂದು ದಿವಸ ಒಬ್ಬ ಲೆಕ್ಚರರನ್ನು ೮ ಜನ ಪೋಲೀಸನವರು ಹಿಡಿದುಕೊಂಡು ಜೈಲಿಗೆ ಬಂದರು. ಅವರು ಆ ಲೆಕ್ಚರರ್‌ಗೆ ಯಾವ ರೀತಿ ಹೊಡೆಯುತ್ತಿದ್ದರೆಂದರೆ ಮೈಯಿಂದ ರಕ್ತ ಚಿಮ್ಮಿ ಬರುತ್ತಿತ್ತು, ಆ ರೀತಿ ಹೊಡೆಯುತ್ತಿದ್ದರು. ಶ್ರೀ ಲಾರೆನ್ಸ್ ಫರ್ನಾಂಡೀಸ್ ಅವರು ಸಹ ಅಲ್ಲಿದ್ದರು. ಪೋಲೀಸ್ ಸ್ಟೇಷನ್‌ಗಳಲ್ಲಿ ಏರೋಪ್ಲೇನ್ ಎತ್ತುವುದು ಮಾಮೂಲಾಗಿ ಬಿಟ್ಟಿದೆ. ಈ ಎಲ್ಲ ಕಾರಣಗಳಿಂದ ಪೋಲೀಸರನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ತಾವು ಹೋಗಬೇಡಿ ಎಂದು ಹೇಳುತ್ತೇನೆ. ಒಂದು ವೇಳೆ ಹೋದರೆ, ತಾವು ವಿವೇಕ ಶೂನ್ಯರೆಂದು ನಾನು ಹೇಳಬೇಕಾಗುತ್ತದೆ.

ಶ್ರೀ ಜಿ. ಕೆ. ತಕ್ಕೋಡ್.— ಪೋಲೀಸರು ಇಲ್ಲದಿದ್ದರೆ ಜನರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡುವವರು ಯಾರು ? ತಾವೇನಾದರು ಗೃಹ ಮಂತ್ರಿಗಳಾದರೆ .. ...

ಶ್ರೀ ಮಳ್ಳೂರು ಆನಂದರಾವ್.— ಸ್ವಾಮಿ, ನಾನು ಈಲ್ಡ್ ಆಗಿಲ್ಲ ಈ ಪೋಲೀಸಿನವರು ನಾಗರೀಕರಿಗೆ ಯಾವ ರೀತಿ ಹಿಂಸೆ ಕೊಡುತ್ತಾರೆ, ಮತ್ತು ಅವರು ಉಪಯೋಗಿಸತಕ್ಕಂಥ ವಿಧಾನಗಳು ಯಾವುವು ಎಂಬುದೆಲ್ಲಾ ಜನಜನಿತವಾಗಿದೆ; ಪ್ರಚಲಿತವಾಗಿದೆ. ಅವರು ಬಹಳ ಒಳ್ಳೆಯವರು ಎಂದು ಯಾರಾದರೂ ತಮ್ಮ ಹೃದಯದ ಮೇಲೆ ಕೈಯಿಟ್ಟುಕೊಂಡು ಹೇಳುತ್ತಾರೆಯೇ ? ಅವರ ಕೈಯಲ್ಲಿ ಸಿಕ್ಕಿದರೆ ಮುಗಿಯಿತು, ಮೂಳೆ ಮುರಿದು ಹಾಕುತ್ತಾರೆ; ಸಾಯುವವರೆಗೂ ಹೊಡೆಯುತ್ತಾರೆ. ಅಂತಹವರನ್ನು ಏತಕ್ಕೆ ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಿ? ಈಗಲೂ ಪೋಲೀಸರು ಹಳೆಯ ಪದ್ಧತಿಯನ್ನೇ ಉಪಯೋಗ ಮಾಡುತ್ತಾರೆ. ಹಳೆಯ ಪದ್ಧತಿಗಳೇನು ಎಂಬುದನ್ನು ಇಲ್ಲಿ ವಿವರವಾಗಿ ಹೇಳುವ ಅಗತ್ಯವಿಲ್ಲ. ಪೋಲೀಸರು ಉಪಯೋಗ ಮಾಡುವಂತಹ ಕ್ರೂಡ್ ಮೆಥಡ್ ಏನೆಂಬುದು ಜನರಿಗೆ ಗೊತ್ತಿದೆ. ಇಲ್ಲಿ ಸಾಧು ಯಾವ ರೀತಿ ಸತ್ತ ಎಂಬ ಬಗ್ಗೆ ಮೆಡಿಕಲ್ ರಿಪೋರ್ಟ್ ಇದೆ. ಅದರಲ್ಲಿ ಪೋಲೀಸರ ಹೊಡೆತದಿಂದ ಸತ್ತಿರುವುದು ಎಂದು ಹೇಳಿದ್ದಾರೆ. ಆದರೆ ಮಾನ್ಯ ತಕ್ಕೋಡ್ ಅವರು ಆತನಿಗೆ ಅಸ್ತಮ ರೋಗ ಇತ್ತು ಎಂದು ಹೇಳಿದ್ದಾರೆ. ಅಸ್ತಮಾ ರೋಗವಿರುವವರು ಅವರೇ ರಪರಪ ಹೊಡೆದುಕೊಂಡು ಸಾಯುತ್ತಾರೆಯೇ ? ಆತನೇ ಹೊಡೆದುಕೊಂಡು ಸತ್ತ ಎನ್ನುವುದಾದರೆ. ಆತನಿಗೆ ದೊಣ್ಣೆಯನ್ನು ಕೊಟ್ಟವರು ಯಾರು ? ಆತ ಪೋಲೀಸ್ ಕಸ್ಟಡಿಯಲ್ಲಿರಬೇಕಾದರೆ, ಆತನಿಗೆ ಬ್ಲೇಡನ್ನಾಗಲೀ, ಆಯುಧವನ್ನಾಗಲೀ, ದೊಣ್ಣೆಯನ್ನಾಗಲೀ, ಚಾಕುವನ್ನಾಗಲೀ ಕೊಟ್ಟವರು ಯಾರು ? ಹೊಡೆದುಕೋ ಎಂದು ಪೋಲೀಸರೇ ಕೊಟ್ಟರೇ ಅಥವಾ ಮಾಯಮಂತ್ರದಿಂದ ಏನಾದರೂ ಆ ಸಾಧು ಆಯುಧವನ್ನು ಪಡೆದುಕೊಂಡನೇ ? ಇವೆಲ್ಲಾ ಅನುಮಾನಗಳು ಬರುತ್ತವೆ. ನಾವು ಆ ಕಡೆಯೇ ಇರಲಿ, ಈ ಕಡೆಯೇ ಇರಲಿ, ಸತ್ಯ ಸಂಗತಿಯನ್ನು ಹೇಳಬೇಕಾಗುತ್ತದೆ.

ಶ್ರೀ ಎಸ್. ಎಸ್. ಅರಕೇರಿ.— ತಾವು ಇದನ್ನು ರಾಜಕೀಯ ಬಂಡವಾಳವನ್ನಾಗಿ ಮಾಡಿಕೊಳ್ಳಬೇಡಿ.

ಶ್ರೀ ಮಳ್ಳೂರು ಆನಂದರಾವ್.— ಇದನ್ನು ರಾಜಕೀಯ ಬಂಡವಾಳವನ್ನಾಗಿ ಮಾಡಿ ಕೊಳ್ಳುವುದರಿಂದ ಓಟುಗಳೇನು ಬರುವುದಿಲ್ಲ. ಪೋಲೀಸರು ಆ ಸಾಧುವನ್ನು ಹೊಡೆದು ಕೊಂದಿದ್ದಾರೆಂಬ

ಗಂಭೀರವಾದಂಥ ಆಪಾದನೆ ಇದೆ. ಆದ್ದರಿಂದ ಇದರಲ್ಲಿ ರಾಜಕೀಯವೇನೂ ಇಲ್ಲ. ಪೋಲೀಸರು ಆತ ನನ್ನು ಭಾರವಾದ ಆಯುಧದಿಂದ ಹೊಡೆದ ಮೇಲೆ ಸತ್ತಿದ್ದಾನೆಂಬದು ನಿಸ್ಸಂಶಯ. ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಪ್ರಶ್ನೆ ಕೇಳ ಬಯಸುತ್ತೇನೆ, ಏನೆಂದರೆ, ಒಬ್ಬ ಸಾಮಾನ್ಯ ವ್ಯಕ್ತಿ ಇಲ್ಲವೇ ಒಬ್ಬ ಸಾಮಾನ್ಯ ನಾಗರೀಕನನ್ನು ಇನ್ನೊಬ್ಬ ವ್ಯಕ್ತಿ ಹಿಡಿದುಕೊಂಡು ಪ್ರಜ್ಞಾಶೂನ್ಯನಾಗುವ ವರೆಗೂ ಹೊಡೆದು ನಂತರ ಆಸ್ಪತ್ರೆಗೆ ಸೇರಿಸಿದಾಗ ಹೊಡೆಸಿಕೊಂಡ ಆ ವ್ಯಕ್ತಿ ಏನಾದರು ಸತ್ತರೆ, ಹೊಡೆದ ವ್ಯಕ್ತಿಗೆ ಕಾನೂನಿನ ಪ್ರಕಾರ ಏನು ಶಿಕ್ಷೆ ವಿಧಿಸಲಾಗುತ್ತದೋ ಅದೇ ರೀತಿಯ ಶಿಕ್ಷೆಯನ್ನು ಈ ಪ್ರಕರಣ ದಲ್ಲಿ ಭಾಗಿಗಳಾದವರಿಗೆ ಕೊಡಲಾಗುತ್ತದೆಯೋ? ಎಂದು ಕೇಳ ಬಯಸುತ್ತೇನೆ. ಇದು ಕೋರ್ಟಿನಲ್ಲಿ ತೀರ್ಮಾನವಾಗಬೇಕು ಎಂದು ಸರ್ಕಾರದವರು ಉತ್ತರ ಹೇಳಬಹುದು. ಆದರೆ, ಆ ಸಾಧುವನ್ನು ಪೋಲೀಸಿನವರು ಹೊಡೆದು ಕೊಂದಿದ್ದಾರೆ ಎಂದು ನಾನು ಈ ಪ್ರಕರಣದಲ್ಲಿ ಆಪಾದನೆ ಮಾಡಿಯೇ ಮಾಡುತ್ತೇನೆ. ಇದಕ್ಕೆ ಸಂಬಂಧ ಪಟ್ಟಂತೆ ಈಗಾಗಲೇ ಒಬ್ಬರನ್ನು ಸಸ್ಪೆಂಡ್ ಮಾಡಿದ್ದೀರಿ ಆದರೆ ನನ್ನ ಅಭಿಪ್ರಾಯದಲ್ಲಿ ಅದು ಶಿಕ್ಷೆ ಅಲ್ಲವೇ ಅಲ್ಲ. ಏಕೆಂದರೆ, ತಾವು ೫ ವರ್ಷಗಳ ಕಾಲ ಅವರನ್ನು ಸಸ್ಪೆಂಡ್‌ನಲ್ಲಿ ಇಟ್ಟರೂ ಸಹ ೭೫ ಪರ್ಸೆಂಟಿನಷ್ಟು ಸಂಬಳ ಸಿಕ್ಕೇ ಸಿಗುತ್ತದೆ. ಸಸ್ಪೆಂಡ್ ಕೇಸ್ ೬ ತಿಂಗಳಲ್ಲಿ ಇತ್ಯರ್ಥವಾಗದಿದ್ದರೆ. ಸಸ್ಪೆಂಡ್ ಆದವರಿಗೆ ೯೦ ಪರ್ಸೆಂಟ್ ಸಂಬಳ ಕೊಡಬೇಕಾಗುತ್ತದೆ. ಆದ್ದರಿಂದ ಇದೇನೂ ದೊಡ್ಡ ಶಿಕ್ಷೆಯಲ್ಲ. ಇದಕ್ಕೆ ಬದಲು ಆ ಪೋಲೀಸ್ ಅಧಿಕಾರಿಯನ್ನು ಏತಕ್ಕೆ ಅರೆಸ್ಟ್ ಮಾಡಲಿಲ್ಲವೆಂದು ನಾನು ಕೇಳುತ್ತೇನೆ. ರಾಜನ್ ಕೇಸ್‌ನಲ್ಲಿ ಯಾವ ರೀತಿ ಸಂಬಂಧಪಟ್ಟ ಅಧಿ ಕಾರಿಗಳನ್ನು ಅರೆಸ್ಟ್ ಮಾಡಿ ಜೈಲಿನಲ್ಲಿಡಲಾಗಿತ್ತೋ, ಅದೇ ರೀತಿ ಇವರನ್ನು ಜೈಲಿಗೆ ಹಾಕಬೇಕು. ಇದರಲ್ಲಿ ಪೋಲೀಸ್ ಅಧಿಕಾರಿಗಳೇ ಇನ್‌ವಾಲ್ವ್ ಆಗಿರುವುದರಿಂದ, ಅವರನ್ನು ಅರೆಸ್ಟ್ ಮಾಡದಿದ್ದರೆ, ಮುಂದೆ ಆಗುವಂತಹ ತನಿಖೆಗೆ ಭಂಗ ಬರಬಹುದು ಜೊತೆಗೆ ಸತ್ಯ ಹೊರಗಡೆಗೆ ಬರುವುದಿಲ್ಲ. ಸತ್ಯ ಸಂಗತಿಗಳನ್ನು ತನಿಖೆಗೆ ಮೊದಲೇ ಮುಚ್ಚಿ ಹಾಕಲು ಅವರು ಪ್ರಯತ್ನ ಮಾಡಬಹುದು. ಅವರು ಆ ರೀತಿ ಮಾಡಿದ್ದೇ ಆದರೆ ಮುಂದೆ ಕೋರ್ಟಿನಲ್ಲಿ ಈ ಕೇಸ್ ಬಿದ್ದು ಹೋಗಬಹುದು ಆದ್ದರಿಂದ ಪೋಲೀಸ್ ಇನ್ಸ್‌ಪೆಕ್ಟರ್ ಒಬ್ಬರನ್ನು ಮಾತ್ರ ಸಸ್ಪೆಂಡ್ ಮಾಡಿದರೆ ಸಾಲದು. ಇದಕ್ಕೆ ಸಂಬಂಧಪಟ್ಟ ಎಲ್ಲ ಉನ್ನತಾಧಿಕಾರಿಗಳನ್ನು ಸಹ ಸಸ್ಪೆಂಡ್‌ನಲ್ಲಿಡಬೇಕು: ಜೊತೆಗೆ ಅವರನ್ನು ಬೆಂಗಳೂರಿನಲ್ಲಿಡಬಾರದು, ಇಟ್ಟರೆ ತನಿಖೆ ಸರಿಯಾಗಿ ಆಗುವುದಿಲ್ಲ. ನಾನು ಮೊದಲೇ ಹೇಳಿದಂತೆ ಸಸ್ಪೆಂಡ್‌ನಲ್ಲಿಡುವುದು ಸರಿಯಾ ದಂಥ ಶಿಕ್ಷೆಯಾಗುವುದಿಲ್ಲ. ಆದ್ದರಿಂದ ಆ ಸಾಧುವನ್ನು ಆಸ್ಪತ್ರೆಗೆ ಸಾಗಿಸುವುದಕ್ಕೆ ಮೊದಲು ಯಾರು ಯಾರು ಆ ಸಾಧುವನ್ನು ಹೊಡೆದಿದ್ದಾರೆ ಅವರನ್ನೆಲ್ಲಾ ಅರೆಸ್ಟ್ ಮಾಡಿಸಿ ಜುಡಿಷಿಯಲ್ ಕಸ್ಟಡಿಗೆ ಒಪ್ಪಿಸಬೇಕು. ಮೊದಲು ಅವರನ್ನೆಲ್ಲಾ ಜೈಲಿಗೆ ಹಾಕಬೇಕೆಂದು ಹೇಳುತ್ತೇನೆ. ಇಲ್ಲಿರತಕ್ಕಂಥ ವಿರೋಧ ಪಕ್ಷದ ಸದಸ್ಯರನ್ನು ತೃಪ್ತಿ ಪಡಿಸಲು ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾವು ಹೇಳು ತ್ತಿಲ್ಲ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಮೂರೂವರೆ ಕೋಟಿ ಜನರನ್ನು ತೃಪ್ತಿಪಡಿಸಲು ತಾವು ನ್ಯಾಯಾಂಗ ತನಿಖೆ ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಪೋಲೀಸರು ಜನತೆಯ ರಕ್ಷಕರಾಗಿರಬೇಕೇ ಹೊರತು ಭಕ್ಷಕರಂತೆ ಇರಬಾರದು. ಆದರೆ ಈಗ ಅವರು ಭಕ್ಷಕರು ಎಂಬ ಭಾವನೆ ಜನರಲ್ಲಿ ಬಂದಿದೆ. ಅದನ್ನು ತಾವು ಮೊದಲು ಹೋಗಲಾಡಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ಕೆಂಗೇಗೌಡ (ಚಾಮರಾಜ).— ಮಾನ್ಯ ಅಧ್ಯಕ್ಷರೇ, ಈ ಪ್ರಕರಣದ ಬಗ್ಗೆ ಎಲ್ಲ ಮಾನ್ಯ ಸದಸ್ಯರು ಹೇಳಿದಂಥ ಮಹತ್ವದ ವಿಷಯಗಳನ್ನು ನಾನು ಕೇಳಿದ್ದೇನೆ. ನಾನು ಎರಡು ವಿಷಯಗಳ ಬಗ್ಗೆ ಇಲ್ಲಿ ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಈಗ ನಮ್ಮ ಮುಂದೆ ಇನ್‌ಕ್ವೆಸ್ಟ್ ರಿಪೋರ್ಟ್ ಏನಿದೆ, ಇದರ ಆಧಾರದ ಮೇಲೆ ನ್ಯಾಯಾಂಗ ತನಿಖೆ ಮಾಡಲು ಬರುವುದಿಲ್ಲವೆಂದು ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಆದರೆ ಅದು ಸರಿಯಲ್ಲ. ನನ್ನ ಬಳಿ ಇರತಕ್ಕಂಥ ಪುಸ್ತಕವನ್ನು ಅವರಿಗೆ ಕೊಡುತ್ತೇನೆ. ಅವರು ಇದರಲ್ಲಿರುವುದನ್ನು ಓದಿ ನೋಡಬಹುದು. ಇದರಲ್ಲಿರತಕ್ಕಂಥ ಸೆಕ್ಷನ್ ೧೭೬ನ್ನು ಮಾನ್ಯ ಬೊಮ್ಮಾಯಿ ಅವರು ಓದಿದರು. ಇದರ ಕಾಮೆಂಟರಿ ಯಲ್ಲಿ ಹೇಳಿರತಕ್ಕಂಥ ಒಂದು ಸೆಕ್ಷನನ್ನು ನಾನು ಓದುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅದು ಹಳೆಯ ಪುಸ್ತಕ.

ಶ್ರೀ ಬಿ. ಎನ್. ಕೆಂಗೇಗೌಡ.— ಇದು ಹಳೆಯ ಪುಸ್ತಕ ನಿಜ. ಇದು ಅಮೆಂಡ್‌ಮೆಂಟ್ ಆಗಿಲ್ಲ. ಇಲ್ಲಿ ಹೇಳಿರುವುದನ್ನು ಓದಿ ಹೇಳುತ್ತೇನೆ :

"A Magistrate when holding an enquiry in this connection is acting as a Court subordinate to the High Court."

For purposes of contempt of Court, there is also a decision.

If you take this subject for discussion, it amounts to sub-judice. Inquest Reportನಲ್ಲಿ On 4-3-80 at 11.20 P.M. Dr. Rajashekar, Medical Officer Victoria Hospital Bangalore has last seen the deceased when he was alive and taking treatment from him at emergency ward of Victoria Hospital; Bangalore. ಅವರು ಕಾಲಂ ನಂಬರ್ ೭ರಲ್ಲಿ "ಮೃತನ ಮೈಮೇಲೆ ಯಾವ ಅನುಮಾನಾಸ್ಪದವಾದ ಗಾಯದ ಗುರುತುಗಳಾಗಲೀ ಬೆಲೆ ಬಾಳತಕ್ಕ ಒಡವೆಗಳಾಗಲೀ ಇರುವುದಿಲ್ಲ" ಎಂದು ಬರೆದಿದ್ದಾರೆ. ಅಂದರೆ ಈ ಇನ್‌ಕ್ವೆಸ್ಟ್ ರಿಪೋರ್ಟಿನಲ್ಲಿ ಡಾಕ್ಟರ್ ರಾಜಶೇಖರ್‌ರವರು ಮೃತನ ಮೈಮೇಲೆ ಅನುಮಾನಾಸ್ಪದವಾದ ಗಾಯಗಳ ಗುರುತು ಯಾವುದೂ ಇರಲಿಲ್ಲ ಎಂದು ಹೇಳಿರುತ್ತಾರೆ. This is the opinion of a lay man. In the post mortem the opinion of an expert who can decide wounds according to medical science is given. ಎಕ್ಸ್‌ಪರ್ಟ್ ಒಪಿನಿಯನ್‌ಗೂ, ಲೇ ಪರ್ಸನ್ ಒಪಿನಿಯನ್‌ಗೂ ವ್ಯತ್ಯಾಸ ಇದೆ. ಆದರೆ ಅದೇನು ಬೇರೆ ಬೇರೆ ಆಗುವುದಿಲ್ಲ ಎಂದು ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇನ್‌ಕ್ವೆಸ್ಟ್ ರಿಪೋರ್ಟ್‌ನಲ್ಲಿ ಹೆಚ್ಚಿನ ಭಿನ್ನತೆ ಕಾಣುವುದಿಲ್ಲ. ಲೇ ಪರ್ಸನ್ ಒಪಿನಿಯನ್ ಮತ್ತು ಎಕ್ಸ್‌ಪರ್ಟ್ ಒಪಿನಿಯನ್ ಎರಡೂ ಇರುವುದರಿಂದ the expert says according to medical science, and the lay man's opinion is according to common sense.

ಶ್ರೀ ಎಂ. ಸಿ. ನಾಣಯ್ಯ.— ಮಾನ್ಯ ಮಿತ್ರರಾದಂಥ ಶ್ರೀಮಾನ್ ಕೆಂಗೇಗೌಡರು ಒಂದು ವಿಷಯವನ್ನು ಹೇಳಿದರು. ಅದೇನೆಂದರೆ, ಒಂದು ಕಡೆ ಎಕ್ಸ್‌ಪರ್ಟ್ ಒಪಿನಿಯನ್ ಕೊಟ್ಟಿದ್ದಾರೆ, ಇನ್ನೊಂದು ಕಡೆ ಲೇಮ್ಯಾನ್ ಒಪಿನಿಯನ್ ಕೊಟ್ಟಿದ್ದಾರೆ ಎಂದು ಅವರು ಎಕ್ಸ್‌ಪರ್ಟ್ ಒಪಿನಿಯನ್ ಅನ್ನು ಒಪ್ಪಿಕೊಳ್ಳದೇ ಇರತಕ್ಕಂಥ ಪರಿಸ್ಥಿತಿಗೆ ಬಂದಿದ್ದರೆ ಪೋಸ್ಟ್ ಮಾರ್ಟಂ ರಿಪೋರ್ಟ್‌ನ್ನು ಅಕ್ಸೆಪ್ಟ್ ಮಾಡಿಕೊಳ್ಳಬಹುದು ಎಂದು ಕಾಣುತ್ತದೆ.

ಶ್ರೀ ಬಿ. ಎನ್. ಕೆಂಗೇಗೌಡ — ಮಾನ್ಯ ತಕ್ಕೇಡ್‌ರವರು ವಿವರವಾಗಿ ಹೇಳಿದ್ದಾರೆ. Self-inflicted injuries ಏಕೆ ಆಗಿರಬಾರದು ? The opinion of the expert is correct. ಅದನ್ನು ವಿರೋಧ ಮಾಡುವುದಕ್ಕಾಗುವುದಿಲ್ಲ.

(ಶ್ರೀ ಎಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಪಾರ್ನಳಿ ರಾಮಸ್ವಾಮಿ (ಗಂಡಸಿ) :— ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಪಕ್ಷದ ಹಿನ್ನೆಲೆಯಲ್ಲಿ ವಾದ ಮಾಡಬಾರದು ಎಂದು ನಾನು ಮೊದಲನೆಯದಾಗಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆ ಮಾಡಿದರೆ ಏನಾಗುತ್ತದೆ ಎಂದರೆ, ಇದರಲ್ಲಿರತಕ್ಕ ಸತ್ಯ ತಿಳಿಯಾಗುತ್ತದೆ. ಪಕ್ಷದ ಆಧಾರದ ಮೇಲೆ ವಾದಮಾಡುವುದಾದರೆ, ಇದರ ಮೌಲ್ಯ ಹೊರಟುಹೋಗುತ್ತದೆ. ಪಕ್ಷದ ಆಧಾರದ ಮೇಲೆ ಈ ಮಾತುಗಳನ್ನು ಹೇಳುವುದಿಲ್ಲ ಎಂದು ಮೊದಲನೆಯದಾಗಿ ತಿಳಿಯಬಯಸುತ್ತೇನೆ. ಸರ್ಕಾರದ ಆಡಳಿತ ನಡೆಸುವಾಗ ಅವರು ಬೇರೆಯಲ್ಲ, ನಾವು ಬೇರೆ ಅಲ್ಲ. ಅವರೂ ನಾವು ಜೊತೆಯಲ್ಲಿ ಇದ್ದು ಕೆಲಸ ಮಾಡಿದವರು. ಸರ್ಕಾರದಲ್ಲಿ ವ್ಯಕ್ತಿಗಳು ಕೆಲವು ಕಾಲ ಇರುತ್ತಾರೆ ಹೋಗುತ್ತಾರೆ, ಆದರೆ ಸರ್ಕಾರದ ಕೆಲಸ ಮಾಡುವಾಗ ನ್ಯಾಯ ನಿರ್ವಹಣೆ ಮಾಡಬೇಕಾಗುತ್ತದೆ. ನ್ಯಾಯ ನಿರ್ವಹಣೆ ಮಾಡುವಾಗ ನ್ಯಾಯ ಮಾಡುವುದರ ಜೊತೆಗೆ ನ್ಯಾಯ ಮಾಡುತ್ತಾ ಇದ್ದಾರೆ ಎಂದು ಜನಗಳಿಗೆ ಕಾಣಬೇಕು. Justice must not only be done but must also appear to have been done. ಜನಗಳ ಕಣ್ಣಿಗೆ ಇವರು ನ್ಯಾಯ ಮಾಡುತ್ತಾ ಇದ್ದಾರೆ ಎಂದು ತೋರಿಸಿಕೊಳ್ಳುವಹಾಗೆ ಮಾಡಬೇಕು, ಈ ಎರಡು ಮಾತುಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ಮಂಥನ ಮಾಡಬೇಕು ಎಂದು ನಾನು

ಅರಿಕೆ ಮಾಡಿಕೊಳ್ಳುತ್ತೇನೆ. ಮೇಲು ನೋಟಕ್ಕೆ ಏನು ಬಂದಿದೆಯೆಂದರೆ, ಹೊರಗಿನ ಒಂದು ಅಘಾತದಿಂದ ಆತ ಸತ್ತಿದ್ದಾನೆ ಎಂಬ ಅಭಿಪ್ರಾಯವನ್ನು ಡಾಕ್ಟರ್ ಕೊಟ್ಟಿದ್ದಾರೆ. ಈ ಅಭಿಪ್ರಾಯ ಸರಿಯೋ, ತಪ್ಪೋ ಎನ್ನುವ ಬಗ್ಗೆ ಕೋರ್ಟಿನಲ್ಲಿ ಬೇಕಾದಷ್ಟು ವಾದ ಮಾಡಬಹುದು. ಒಂದು ಕೇಸಿನ ಅಥವಾ ಮೊಕದ್ದಮೆಯ ತನಿಖೆ ಹಂತದಲ್ಲಿ ಅನುಮಾನವನ್ನು ಬಗೆ ಹರಿಸುವ ಕೆಲಸ ಅವರದಲ್ಲ ಅನುಮಾನ ಸಂದರ್ಭದಲ್ಲಿ ತೀರ್ಮಾನ ಕೊಡತಕ್ಕ ಅಧಿಕಾರ ಇರುವುದು ಕೋರ್ಟಿಗೆ ಮಾತ್ರ. ತನಿಖೆ ಕಾಲದಲ್ಲಿ ಮೇಲುನೋಟಕ್ಕೆ ನ್ಯಾಯ ಕಂಡರೂ ಕೂಡ ಅದನ್ನು ಕೋರ್ಟಿನ ತಲೆ ಮೇಲೆ ಹಾಕಿ, ಅದರ ತೀರ್ಮಾನಕ್ಕೆ ಬಿಡುವುದು—ಈ ಒಂದು ಸಂಪ್ರದಾಯ ಬಂದಿದೆ. ತನಿಖೆಯ ಮಟ್ಟದಲ್ಲಿ ಒಬ್ಬ ವ್ಯಕ್ತಿ ಅಪರಾಧಿ ಅಥವಾ ಅಪರಾಧಿಯಲ್ಲ ಎಂದು ನಿರ್ಧಾರ ಮಾಡುವುದು ಕಷ್ಟವಾಗುತ್ತದೆ. ಈಗ ಅನೇಕ ಮಿತ್ರರು ಎರಡು ರೀತಿಯ ವಾದಗಳನ್ನು ಮಾಡಿದ್ದಾರೆ. ಅದು ಬೇರೆ ಬೇರೆ ಎಂದು ಹೇಳಬಹುದು. ಈ ಇನ್‌ಕ್ವೆಸ್ಟ್ ರಿಪೋರ್ಟ್‌ನಲ್ಲಿ ಮರ್ಮ ಸ್ಥಾನ ಊದಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಡಾಕ್ಟರ್ ಅದಕ್ಕಿಂತ ಹೆಚ್ಚಿಗೆ ಹೊರಗಿನ ಮತ್ತು ಆಂತರಿಕ ಛಾಯಗಳನ್ನು ನೋಡಿ ಕಂಡುಹಿಡಿದಿದ್ದಾರೆ. ಅಲ್ಲದೆ Death is due to shock and haemorrhage ಎಂದು ಸಾವಿಗೆ ಕಾರಣವನ್ನೂ ಕೂಡ ಕೊಟ್ಟಿದ್ದಾರೆ. ಆ ವರದಿಯ ಮೊದಲನೇ ಮಾತಿನಲ್ಲಿ ಇದು ಸಹಜ ಸಾವು ಅಲ್ಲ, ಅಸಹಜವಾದಂಥ ಸಾವು ಹೊರಗಿನ ಒಂದು ಅಘಾತದಿಂದ ಸಾವು ಸಂಭವಿಸಿದೆ ಎಂದು ಕಂಡುಬರುತ್ತದೆ ಮೊದಲನೇ ದಿವಸ ಶ್ರೀಮಾನ್ ವೀರಪ್ಪಮೊಯ್ಲಿ ಅವರು ಮಾತನಾಡುತ್ತಾ, ಏನಾದರೂ ಅನುಮಾನ ಕಂಡರೆ ಪೋಲೀಸ್ ಕಮೀಷನರ್‌ರವರು ಐಪಿಸಿ ೩೦೨ನೇ ವಿಧಿ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ ಇನ್‌ವೆಸ್ಟಿಗೇಷನ್ ಮಾಡುತ್ತಾರೆ ಎಂದು ಹೇಳಿದರು. ಡಾಕ್ಟರ್ ಚಂದ್ರೇಗೌಡರ ವರದಿ ಬಂದ ತಕ್ಷಣ ಅವರ ಆ ಕೆಲಸವನ್ನು ಮಾಡಬೇಕಾಗಿತ್ತು. ಅಪರಾಧಿ ಯಾರು ಎಂದು ಅಪರಾಧವನ್ನು ಹೊರಿಸುವುದಕ್ಕೆ, ಚಾರ್ಜ್‌ಶೀಟ್ ಹಾಕುವುದಕ್ಕೆ ಬೇಕಾದಂಥ ಸಾಕ್ಷಿ ಸಾಹಿತ್ಯಗಳು ದೊರೆಯಲಿ, ಬಿಡಲಿ, ಕೇಸನ್ನು ರಿಜಿಸ್ಟರ್ ಮಾಡಿ ತನಿಖೆ ಮಾಡಬೇಕಾದುದು ಮೊದಲನೇ ಕರ್ತವ್ಯ. ಹಾಗೆ ಮಾಡಿದ್ದಾರೋ ಇಲ್ಲವೊ ಗೊತ್ತಿಲ್ಲ. ಆ ರೀತಿ ಮಾಡದೇ ಹೋಗಿದ್ದರೆ ಆ ಬಗ್ಗೆ ಸರ್ಕಾರದ ಮೇಲೆ (ನಿಮ್ಮ ಮೇಲೆ) ಜವಾಬ್ದಾರಿಯನ್ನು ಹೊರಿಸುವುದಕ್ಕೆ ಬದಲಾಗಿ, ಸರ್ಕಾರದ ಗೌರವದ ದೃಷ್ಟಿಯಿಂದ ಮತ್ತು ಸರ್ಕಾರದಲ್ಲಿರತಕ್ಕ ಎಲ್ಲ ಮಿತ್ರರ ಒಂದು ವೈಯಕ್ತಿಕವಾದ ಗೌರವದ ದೃಷ್ಟಿಯಿಂದಲೂ ಸಹ ನಾವು ಇದನ್ನು ನೋಡಬೇಕಾಗಿದೆ. ಈ ತನಿಖೆಯ ಪರಿಣಾಮವಾಗಿ ಯಾರೇ ಅಪರಾಧ ಮಾಡಿರಲಿ ಅವರ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ನಮ್ಮ ಮಿತ್ರರಾದ ಮತ್ತು ನನ್ನ ಶಿಷ್ಯರಾದ ಶ್ರೀ ತಕ್ಕೇಡ್ ರವರು ಹೇಳುತ್ತಿದ್ದರು......

ಒಬ್ಬ ಸದಸ್ಯರು.—ಒಳ್ಳೆಯ ಶಿಷ್ಯರನ್ನೇ ತಯಾರು ಮಾಡಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ.—ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದಾಕ್ಷಣವೇ ಪೋಲೀಸಿನವರು ಕೊಲೆ ಮಾಡಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ತಕ್ಕೇಡ್‌ರವರು ಹೇಳುತ್ತಿದ್ದರು. ಅದು ನಿಜ, ಹಾಗೆ ಹೇಳುವುದಕ್ಕಾಗುವುದಿಲ್ಲ. ಈಚಲ ಮರದ ಕೆಳಗೆ ಕುಳಿತು ಕೊಂಡು ಮಜ್ಜಿಗೆ ಕುಡಿದರೂ ಅನುಮಾನ ಬರುತ್ತದೆ ಆ ರೀತಿ ಅನುಮಾನ ಬಾರದ ಹಾಗೆ ನೋಡಿಕೊಳ್ಳತಕ್ಕದ್ದು ಸರ್ಕಾರದವರ ಜವಾಬ್ದಾರಿಯಾಗಿದೆ. ಆ ರೀತಿ ಮಾಡುವುದಕ್ಕೆ ಆಗದೇ ಹೋದರೆ ಎಲ್ಲ ಜವಾಬ್ದಾರಿಯನ್ನು ಒಬ್ಬ ನ್ಯಾಯಾಧೀಶರ ತಲೆಗೆ ಕಟ್ಟಿ, ಆ ನ್ಯಾಯಾಧೀಶರೇ ತನಿಖೆ ಮಾಡಿದರೆ ಎಲ್ಲರಿಗೂ ಕ್ಷೇಮವಾಗುತ್ತದೆ. ಆ ಸಾಧು ಅಪರಾಧ ಮಾಡಿದ್ದರೂ ಅವನಿಗೆ ರಕ್ಷಣೆ ಕೊಡ ಬೇಕೆಂದು ಅಲ್ಲ ; ಆದರೆ ಒಬ್ಬ ಮನುಷ್ಯನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾಗ ಅಲ್ಲಿ ಅವನನ್ನು ಸಾಯಿಸುವುದು ಒಳ್ಳೆಯ ಒಂದು ಸಂಪ್ರದಾಯವಲ್ಲ. ಇದು ದೇಶಕ್ಕೆ ಒಂದು ಕೆಟ್ಟ ದಿನಗಳನ್ನು ಸೂಚಿಸುತ್ತದೆ. ಈ ಒಂದು ಹಿನ್ನೆಲೆಯಲ್ಲಿ ನಮ್ಮ ಸರ್ಕಾರವನ್ನು ನಡೆಸತಕ್ಕ ಮಿತ್ರರು ಇದನ್ನು ಅರ್ಥ ಮಾಡಿಕೊಳ್ಳಬೇಕು, ಇದನ್ನು ಕೇವಲ ಒಂದು ಆತ್ಮ ಗೌರವದ ದೃಷ್ಟಿಯಿಂದ ನೋಡಬಾರದು. ಇದು ಸರ್ವೇಸಾಧಾರಣವಾಗಿ ಯಾರೇ ಆ ಸ್ಥಾನದಲ್ಲಿ ಇರಲಿ ಅವರು ಮಾಡಬೇಕಾದ ಜವಾಬ್ದಾರಿಯುತವಾದ ಕೆಲಸ. ಇವತ್ತು ನೀವು ಇದರಲ್ಲಿ ಏನೋ ರಾಜಕೀಯ ಮಾಡುವುದಕ್ಕೆ ಹೊರಟು, ಯಾರಿಗೋ ರಕ್ಷಣೆ ಕೊಡುತ್ತಿದ್ದೀರಿ ಎನ್ನುವ ಭಾವನೆ ಉಂಟಾಗಿದೆ. ಈ ವಿಷಯದ ಬಗ್ಗೆ ನಮ್ಮ ಪಕ್ಷದವರು ಮತ್ತು ನಿಮ್ಮ ಪಕ್ಷದವರೆಲ್ಲರೂ ಮಾತನಾಡಿದ್ದಾರೆ. ಆದುದರಿಂದ ಪ್ರಜಾಪ್ರಭುತ್ವದ ದೃಷ್ಟಿಯಿಂದ, ನ್ಯಾಯದ ದೃಷ್ಟಿಯಿಂದ ಒಬ್ಬ ನ್ಯಾಯಾಧೀಶರನ್ನು ಇದರ ಬಗ್ಗೆ ವಿಚಾರಣೆ ನಡೆಸಲು ಹಾಕಬೇಕೆಂದು ನಾವುಗಳು ಎನ್ನು ಒತ್ತಾಯ ಮಾಡುತ್ತಿದ್ದೇವೆ ಇದರ ತೀವ್ರತೆಯನ್ನು ಅರ್ಥ ಮಾಡಿಕೊಂಡು ತಾವು ಆ ರೀತಿ ಮಾಡುತ್ತೀರಿ ಎಂಬುದಾಗಿ ಭಾವಿಸಿದ್ದೇನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ :

ಸಭಾಪತಿಯವರು :—ಈ ವಿಚಾರದಲ್ಲಿ ಬಹಳಷ್ಟು ಚರ್ಚೆ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳವರು ಹೇಳಿಕೆ ಕೊಟ್ಟಿದ್ದಾರೆ. ಪುನಃ ಈಗ ಕ್ಲಾರಿಫಿಕೇಷನ್ ಅಂತ ಹೇಳಿ ದೊಡ್ಡ ದೊಡ್ಡ ಭಾಷಣ ಮಾಡುವುದು ಚರ್ಚೆ ನಡಸುವುದು ಬೇಡ. ಆದುದರಿಂದ ಕೇಳತಕ್ಕ ಅಂಶ ಹೊಸದಾಗಿ ಇದ್ದಲ್ಲಿ ಅದನ್ನು ಒಂದೆರಡು ಮಾತಿನಲ್ಲಿ ಕೇಳಿ ಅಂತ ನನ್ನ ಕೋರಿಕೆ. ಅದನ್ನೇ ದೊಡ್ಡದಾಗಿ ಚರ್ಚೆ ಮಾಡುವುದಕ್ಕೆ ಹೋಗುವುದು ಅನಾವಶ್ಯಕ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ :—(ಸೂರತ್ಕಲ್) ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಬಹಳಷ್ಟು ವಿಶ್ಲೇಷಣೆ ನಡೆದಿದೆ. ಇದರಲ್ಲಿ ಹೇಳುವುದು ಹೆಚ್ಚು ಸಂಗತಿಗಳೇನೂ ಇಲ್ಲ. ಪೋಲೀಸ್ ಕಸ್ಟಡಿಯಲ್ಲಿ ಒಬ್ಬ ಆರೋಪಿ ಸತ್ತಿದ್ದಾನೆಂದು ಹೇಳುವುದು, ಪೋಸ್ಟ್ ಮಾರ್ಟಂ ಮಾಡುವಾಗ ಅವನ ಮೇಲೆ ಇಂಜುರೀಸ್ ಇತ್ತು ಅಂತ ಹೇಳುವುದು, ಸರ್ಕಾರದವರು ಒಬ್ಬ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಅಮಾನತಿನಲ್ಲಿಟ್ಟಿದ್ದಾರೆ ಎನ್ನುವುದು, ಹಾಗೂ ಮಾನ್ಯ ತಕ್ಕೇಡ್ ಮತ್ತು ಶ್ರೀ ಕೆಂಗೇಗೌಡರವರು ಮಾತನಾಡುತ್ತಾ, ಆ ಸಾಧುವೇ ಪೋಲೀಸ್ ಕಸ್ಟಡಿಯಲ್ಲಿದ್ದಾಗ ಬಡಿಗೆಯನ್ನು ತೆಗೆದುಕೊಂಡು ತಾನೇ ಹಾಗೆ ಬಡಿದುಕೊಂಡು ಸತ್ತಿರಬಹುದೆಂದು ಹೇಳಿದ್ದಾರೆ. ಆದರೆ ಪೋಲೀಸ್ ಸ್ಟೇಷನ್ನಿನಲ್ಲಿ ಬಡಿಗೆ ಹೇಗೆ ಬಂತು ಎನ್ನುವ ಪ್ರಶ್ನೆ ಇದರಲ್ಲಿ ಬರುತ್ತದೆ. ಹೀಗೆ ಜವಾಬ್ದಾರಿಯುತರಾದ ಸದಸ್ಯರು ಇಲ್ಲ ಈ ರೀತಿ ಹೇಳಬೇಕಾದರೆ ಬಹುಶಃ ವಿಶೇಷವಾದ ಕೆಲವು ಮಾಹಿತಿಗಳು ಅವರ ಬಳಿಯಲ್ಲಿರಬಹುದು ಮತ್ತೆ ಈ ಸಾವಿನ ಬಗ್ಗೆ ಜನಗಳಲ್ಲಿ ಏನು ಒಂದು ಸಂಶಯ ಬಂದಿದೆ ಅದು ಒಳ್ಳೆಯದಲ್ಲ, ಅದನ್ನು ನಿವಾರಣೆ ಮಾಡುವುದು ಬಹಳಷ್ಟು ಅಗತ್ಯವಿದೆ. ಆ ಉದ್ದೇಶದಿಂದ ಒಂದು ಇಂಪಾರ್ಷಿಯಲ್ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕಾದುದು ಬಹಳಷ್ಟು ಅಗತ್ಯವಾಗಿದೆ. ಅದಕ್ಕಾಗಿ ಒಬ್ಬ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಅವರ ಮೂಲಕ ಜುಡಿಷಿಯಲ್ ಎನ್‌ಕ್ವೈರಿ ಮಾಡತಕ್ಕದ್ದು ಅಗತ್ಯವೆಂದು ಹೇಳಬಯಸುತ್ತೇನೆ. ಏತಕ್ಕೆಂದರೆ ಇದಕ್ಕೆ ಸಂಬಂಧಪಟ್ಟಂತಹ ಒಬ್ಬ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆಯೆಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ ಆದರೆ ಅಲ್ಲಿ ಏನೋ ನಡೆದಿದೆ, ಮತ್ತು ವಿಚಾರಣೆ ಸರಿಯಾಗಿ ನಡೆದಿಲ್ಲ ಎನ್ನುವ ಅನುಮಾನ ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ ಈ ಎಲ್ಲಾ ಸಂಶಯಗಳು ಬಾರದೇ ಇರುವ ಹಾಗೆ ಮಾಡಬೇಕಾದರೆ ಜುಡಿಷಿಯಲ್ ಎನ್‌ಕ್ವೈರಿಯನ್ನೇ ನಡೆಸಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

† ಶ್ರೀ ಪಿ.ಎಸ್. ರೆಡ್ಡಿ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿಗಳವರು ನಮ್ಮ ಮುಂದೆ ಇನ್‌ಕ್ವೆಸ್ಟ್ ರಿಪೋರ್ಟನ್ನು ಮತ್ತು ಪೋಸ್ಟ್ ಮಾರ್ಟಂ ರಿಪೋರ್ಟನ್ನು ಇಟ್ಟಿದ್ದಾರೆ. ಇದರಿಂದ ಅವರು ನಿಷ್ಪಕ್ಷಪಾತವಾದ ರಿಪೋರ್ಟನ್ನೇ ಇಟ್ಟಿದ್ದಾರೆಂಬುದು ಅರ್ಥವಾಗುತ್ತದೆ. ಏತಕ್ಕೆಂದರೆ ಇದರಲ್ಲಿ ಏನಾದರೂ ಸ್ವಲ್ಪ ಮೋಸದ ರೀತಿಯಲ್ಲಿ ಮಾಡಬೇಕಾಗಿದ್ದರೆ ಅವರು ಈ ಒಂದು ರಿಪೋರ್ಟನ್ನೇ ಇಡುತ್ತಿರಲಿಲ್ಲ. ಆದುದರಿಂದ ಈ ಇನ್‌ಕ್ವೆಸ್ಟ್ ರಿಪೋರ್ಟ್‌ನಲ್ಲಿ ಹಾಗೂ ಪೋಸ್ಟ್ ಮಾರ್ಟಂ ರಿಪೋರ್ಟ್‌ನಲ್ಲಿ ಸ್ವಲ್ಪ ಅಂತರವಿದೆ ಎಂದು ಸರ್ಕಾರಕ್ಕೆ ಅನುಮಾನ ಕಂಡು ಬಂದುದರಿಂದ ಸರ್ಕಾರದವರೇ ಎರಡನೇ ಬಾರಿ ಶವ ಪರೀಕ್ಷೆ ಮಾಡಲು ಆಜ್ಞೆ ಮಾಡಿದ್ದಾರೆ. ಅದರ ವರದಿ ಬಂದ ಮೇಲೆ ಅದನ್ನು ಸಹ ಈ ಸಭೆಯ ಮುಂದಿಡುವುದಾಗಿ ಹೇಳಿದ್ದಾರೆ. ಈ ಬಗ್ಗೆ ತನಿಖೆ ನಡೆಯುತ್ತಿರುವಾಗ ನಾವು ಅವನ ಹತ್ತಿರ ಬಂಗಾರವಿತ್ತು, ಅದು ಇತ್ತು, ಇದು ಇತ್ತು ಎಂದು ಚರ್ಚೆ ಮಾಡಿಕೊಂಡು ಹೋಗುವುದು ಸರಿಯಲ್ಲ. ಈ ರೀತಿ ಎಲ್ಲಾ ನಾವು ಚರ್ಚೆ ಮಾಡುತ್ತಾ ಕುಳಿತುಕೊಂಡರೆ ಇನ್‌ವೆಸ್ಟಿಗೇಷನ್ ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಈ ರೀತಿಯಾದರೆ, ಸರ್ಕಾರ ನಿಷ್ಪಕ್ಷಪಾತವಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಎರಡನೇ ಬಾರಿ ಶವ ಪರೀಕ್ಷೆ ಮಾಡಿದನಂತರ ಬರತಕ್ಕಂಥ ವರದಿಯನ್ನು ಸಹ ಈ ಸದನದ ಮುಂದೆ ಮಂಡಿಸುತ್ತೇನೆಂದು ಹೇಳಿದ್ದಾರೆ. ಆಗ ಪುನಃ ಅದರಲ್ಲಿ ಏನಾದರೂ ಅನುಮಾನ ಕಂಡುಬಂದರೆ ನಾವು ಸದರಿ ಪ್ರಸಂಗದ ಬಗ್ಗೆ ಮಾತನಾಡೋಣ.

೪-೩೦ ಪಿ. ಎಂ.

ಯಾವ ಒಂದು ತೊಂದರೆಯೂ ಇಲ್ಲದೆ ನಿಷ್ಪಕ್ಷಪಾತವಾಗಿ ಇನ್‌ಕ್ವೆಸ್ಟ್ ರಿಪೋರ್ಟ್ ಮತ್ತು ಪೋಸ್ಟ್ ಮಾರ್ಟಂ ರಿಪೋರ್ಟ್‌ಗಳನ್ನು ಕೊಟ್ಟಿರುವಾಗ ಪುನ: ರಿಪೋರ್ಟನ್ನು ಕೊಡುವ ಪ್ರಸಂಗ ಬಂದ ಕಾರಣ ವಿಷಯ ಚರ್ಚಾ ರೀತಿಯಲ್ಲಿ ಮುಂದುವರಿದುಕೊಂಡು ಹೋಗಲೇಬೇಕಾಗುತ್ತದೆಂದು ಹೇಳುತ್ತೇನೆ.

(ಈ ಸಂದರ್ಭದಲ್ಲಿ ಉಭಯ ಪಕ್ಷಗಳ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಲು ಎದ್ದು ನಿಂತರು)

ಸಭಾಪತಿಯವರು.— ಇಷ್ಟೆಲ್ಲ ಜನಗಳಿಗೆ ಈ ವಿಚಾರದಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರಾದ ಹಾರನಳ್ಳಿ ರಾಮಸ್ವಾಮಿಯವರು, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಏನೇನು ಸಂಶಯಗಳಿವೆ ಎಂಬುದನ್ನು ಎತ್ತಿ ತೋರಿಸಿದ್ದಾರೆ, ಅದೇ ರೀತಿ ಮಾನ್ಯ ಸುಬ್ಬಯ್ಯಶೆಟ್ಟರು ಸಹ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಅವುಗಳನ್ನು ಪರಿಹರಿಸಬೇಕೆಂದು ಕೂಡ ಹೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಕೆಲವು ನಿರ್ದಿಷ್ಟವಾದ ವಿಷಯಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯಬೇಕಾಗಿದೆ: ಬಹು ಪಾಲು ಆ ಕಡೆಯ ಸದಸ್ಯರುಗಳಿಗೆ ಮುಖ್ಯ ಮಂತ್ರಿಗಳನ್ನು ಡಿಫೆಂಡ್ ಮಾಡುವುದಕ್ಕೆ ಅವಕಾಶ ಕೊಟ್ಟಿರಿ.

ಶ್ರೀ ಐ.ಪಿ.ಡಿ. ಸಾಲಪ್ಪ.— ಇಲ್ಲಿ ಡಿಫೆಂಡ್ ಮಾಡುವ ಪ್ರಶ್ನೆ ಬರುವುದಿಲ್ಲ. ಆದ್ದರಿಂದ, ಮಾನ್ಯ ಸದಸ್ಯರು ದಯಮಾಡಿಟ್ಟು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಅಂಥ ಅಪರಾಧವನ್ನೇನು ಮಾಡಿಲ್ಲ.

ಸಭಾಪತಿಯವರು.— ಮುಖ್ಯ ಮಂತ್ರಿಗಳನ್ನು ಯಾರೂ ಡಿಫೆಂಡ್ ಮಾಡಬೇಕಾಗಿಲ್ಲ. ಅವರೇ ಬೇಕಾದರೆ ಮಾಡಿಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನಗೆ ಒಂದು ಸಾರಿಯೂ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲ. ನೀವು ಬೇಡ ಎಂದರೆ, ಅವರು ಹೇಳಿದ್ದನ್ನು ಕೇಳಿಕೊಂಡು ನಾವು ಸುಮ್ಮನೇ ಕುಳಿತಿರಬೇಕಾಗುತ್ತದೆ. ಇಲ್ಲಿ ನಾವು ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಬೇಜವಾಬ್ದಾರಿಯುತವಾದ ಆಪಾದನೆಯನ್ನೇನು ಮಾಡಿಲ್ಲ. ಮಾಡುವುದಕ್ಕೂ ಹೋಗುವುದಿಲ್ಲ. ಯಾರೂ ಅವರ ಲಾಯಲ್ ಅನ್ನು ಡಿಫೆಂಡ್ ಮಾಡುವ ಅಗತ್ಯ ಇಲ್ಲದಿದ್ದರೂ ಏಕೆ ಮಾಡಬೇಕು ?

ಸಭಾಪತಿಯವರು.— ಬೇರೆ ಸದಸ್ಯರೂ ಕೂಡ ಎದ್ದು ಮಾತನಾಡತಕ್ಕ ಹಕ್ಕನ್ನು ಹೊಂದಿದ್ದಾರೆ. ಅವರ ಹಕ್ಕನ್ನು ಮೊಟಕುಗೊಳಿಸುವುದು ಸರಿಯಲ್ಲ. ಯಾರೂ ಕೂಡ ಈಗ ಮಾತನಾಡುವುದು ಬೇಡವೆಂದರೂ ತಾವು ಎದ್ದು ಮಾತನಾಡಿದರೆ ಹೇಗೆ ?

† ಶ್ರೀ ಕೆ. ಹೆಚ್. ಶ್ರೀನಿವಾಸ್.— ನನ್ನ ಮೇಲೆ ತಾವು ಆರೋಪಣೆ ಮಾಡಿದ್ದರಿಂದ ವಿವರಣೆ ಕೊಡಬೇಕಾಯಿತು. ಈ ಪ್ರಕರಣದ ಬಗ್ಗೆ ಹಿಂದೆ ಮಾತನಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡದ್ದು ಏನೆಂದರೆ. ಸರ್ಕಾರ ಯಾವುದೋ ವಿಷಯವನ್ನು ಮುಚ್ಚಿಡುತ್ತಿದೆಯೆಂದು ನಾವೇನು ಆರೋಪ ಹೊರಿಸಲಿಲ್ಲ. ಇಂಥ ಪ್ರಕರಣ ನಡೆದಾಗ ಸತ್ಯಾಂಶವನ್ನು ಹೊರಗಡೆ ಎಳೆದಿಡತಕ್ಕ ಜವಾಬ್ದಾರಿ ಸರ್ಕಾರದ ಮೇಲಿದೆ. ಅದನ್ನು ನಿರ್ವಹಿಸುವ ಬಗ್ಗೆ ಸರ್ಕಾರ ತೀವ್ರವಾಗಿ ಯೋಚಿಸಬೇಕೆಂಬ ಒತ್ತಾಯವನ್ನು ಹಾಕುತ್ತಿದ್ದೇವೆ. ಇವತ್ತು ಮತ್ತೊಮ್ಮೆ ಅದನ್ನೇ ಹೇಳಬೇಕಾಗಿದೆ. ಮೊದಲು ಈ ಸದನದ ಮುಂದೆ ಇನ್‌ಕ್ವೆಸ್ಟ್ ರಿಪೋರ್ಟನ್ನು ಇಟ್ಟಿದ್ದರು. ನಂತರ ಪೋಸ್ಟ್ ಮಾರ್ಟಂ ರಿಪೋರ್ಟನ್ನು ಇಟ್ಟಿದ್ದಾರೆ. ಅಷ್ಟನ್ನೇ ಇಟ್ಟಿದ್ದರೆ ಹೇಳುವುದಕ್ಕೆ ಸುಲಭವಾಗುತ್ತಿತ್ತು, ಮತ್ತು ಅವರು ಉತ್ತರ ಕೊಡುವುದಕ್ಕೂ ಅನುಕೂಲವಾಗುತ್ತಿತ್ತು. ಆದರೆ ಈ ಮಧ್ಯೆ ಏನಾಗಿದೆ ಎಂದರೆ, ಜಿಲ್ಲಾ ಮ್ಯಾಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಜರ್‌ನ ೧೭೬(೩)ನೇ ಸೆಕ್ಷನ್ ಪ್ರಕಾರ ಬೇರೆ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೆ ಆ ಆಜ್ಞೆ ಅವರ ಅಧಿಕಾರಕ್ಕೆ ಮೀರಿ ಹೊರಡಿಸಿರುವುದೆಂದು ನಾನು ಸ್ಪಷ್ಟಪಡಿಸಬಯಸುತ್ತೇನೆ. ಕ್ರಿಮಿನಲ್ ಪ್ರೊಸೀಜರ್‌ನ ಸೆಕ್ಷನ್ ೧೭೬(೩)ರಲ್ಲಿ ಈ ರೀತಿ ಹೇಳಿದೆ,

> "Whenever such Magistrate considers it expedient to make an examination of the dead body of any person who has been already interned in order to discover the cause of his death..."

ನಾನೂ ಕೂಡ ಸೆಷನ್ ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿದ್ದೇನೆ, ಆದರೆ ಮಾನ್ಯ ತಕ್ಕೇಡ್‌ರವರಷ್ಟು ಕ್ರಿಮಿನಲ್‌ನಲ್ಲಿ ಮುಂದಿಲ್ಲ. ಇಲ್ಲಿರತಕ್ಕ ವಿಷಯ ಏನೆಂದರೆ, ಈ ಸೆಕ್ಷನ್ ೧೭೬ (೩) ಯಾವಾಗ ಬರುತ್ತದೆಂದರೆ. ಸತು ಹೋದವನನ್ನು ಯಾವುದೇ ರೀತಿಯಲ್ಲೂ ಪರೀಕ್ಷೆ ಮಾಡದೆ ಹುಗಿದಿದ್ದ ಸಂದರ್ಭದಲ್ಲಿ ಆ ಶವವನ್ನು ತೆಗೆದು ಪರೀಕ್ಷೆ ಮಾಡುವುದಕ್ಕೆ ಅವಕಾಶ ಇದೆ. ಇದು ಎನೇಬಲಿಂಗ್ ಪ್ರಾವಿಷನ್.

ಇದನ್ನು ಬೇರೆ ಯಾವುದೋ ಉದ್ದೇಶಕ್ಕಾಗಿ ಬಳಸಿಕೊಂಡರೆ ಖಂಡಿತವಾಗಿ ಅಧಿಕಾರವನ್ನು ಮೀರಿ ಆ ಜಿಲ್ಲಾ ಮ್ಯಾಜಿಸ್ಟ್ರೇಟರು ವರ್ತನೆ ಮಾಡಿದ್ದಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅವರು ಕಾನೂನು ಅರ್ಥವಾಗದೇ ಮಾಡಿರಬಹುದು. ಅಥವಾ ಒತ್ತಡದಿಂದ ಮಾಡಿರಬಹುದು. ಕಾನೂನು ತಜ್ಞರಿಗೆ ಕ್ರಿಮಿನಲ್ ಪ್ರೊಸೀಜರಿನ ಸೆಕ್ಷನ್ ೧೭೬ (೩)ನ್ನು ತೋರಿಸಿದರೆ ಅವರು ಸ್ಪಷ್ಟವಾಗಿ ಇದೇ ಅರ್ಥವನ್ನು ಹೇಳುತ್ತಾರೆ. ಒಂದು ಪೋಸ್ಟ್ ಮಾರ್ಟಂ ರಿಪೋರ್ಟ್ ಇರುವಾಗ ಪುನ: ಪೋಸ್ಟ್ ಮಾರ್ಟಂ ಮಾಡಿ ಮತ್ತೊಂದು ರಿಪೋರ್ಟ್ ಕೊಡುವುದು ಖಂಡಿತ ಸೂಕ್ತವಲ್ಲ. ಯಾವುದೇ ಕೋರ್ಟಿಗೆ ಈ ವಿಚಾರವನ್ನು ತೆಗೆದುಕೊಂಡು ಹೋದರೂ ಕೂಡ ಮ್ಯಾಜಿಸ್ಟ್ರೇಟರು ಅನಾವಶ್ಯಕವಾಗಿ ಈ ಕೆಲಸವನ್ನು ಮಾಡಿದ್ದಾರೆ ಇಲ್ಲವೇ ಯಾವುದೋ ಒತ್ತಡದಿಂದ ಮಾಡಿದ್ದಾರೆಂದು ಸ್ಟ್ರಿಕ್ಚರ್ಸ್ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಇವತ್ತು ನಾವು ಕೇಳುವುದೇನೆಂದರೆ, ಈ ಬಗ್ಗೆ ಸರ್ಕಾರದ ಜವಾಬ್ದಾರಿ ಏನು ಎಂದು. ದಯವಿಟ್ಟು ಮಾನ್ಯ ಮಿತ್ರರು (ಆ ಕಡೆಯವರು) ತಿಳಿದುಕೊಳ್ಳಬೇಕು, ಈ ವಿಚಾರದಲ್ಲಿ ನಮಗೆ ರಾಜಕೀಯ ಮಾಡಬೇಕೆಂಬುದೇನು ಇಲ್ಲ. ಎಲ್ಲದಕ್ಕೂ ರಾಜಕೀಯವೆಂದರೆ ಆಗುವುದಿಲ್ಲ. ವಿಷಯಗಳು ಬಂದಾಗ ಹೇಗೆ ಸತ್ಯವನ್ನು ಪತ್ತೆ ಮಾಡಬೇಕೆಂಬುದು ಸರ್ಕಾರದ ಕರ್ತವ್ಯವಾಗಿರುತ್ತದೆ ಮತ್ತು ಅಷ್ಟೇ ಜವಾಬ್ದಾರಿಯನ್ನು ಹೊತ್ತಿರಬೇಕಾಗುತ್ತದೆ. ಆದ್ದರಿಂದ, ಸರ್ಕಾರದ ಮೇಲೆ ಯಾವುದಾದರೂ ಆರೋಪಣೆ ಹೊರಿಸಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಪೋಲೀಸರ ಬಗ್ಗೆ ಆರೋಪಣೆ ಮಾಡಿ ರಾಜ್ಯದಲ್ಲಿರತಕ್ಕ ಪೋಲೀಸರ ವ್ಯವಸ್ಥೆಯನ್ನು ಹದಗೆಡಿಸಬೇಕೆಂಬ ಉದ್ದೇಶವೂ ಇಲ್ಲ. ನಾನು ಹೇಳುತ್ತಿರುವುದೇನೆಂದರೆ, ಇವತ್ತು ಪೋಲೀಸ್ ಆಡಳಿತದಲ್ಲಿ ಆಕಸ್ಮಿಕವಾಗಿ ತಪ್ಪುಗಳು ಆಗಬಹುದು, ಆದರೆ ತಪ್ಪು ಮಿತಿ ಮೀರಿ ಆಗಿದ್ದರೆ ತಪ್ಪಿಗೆ ತಕ್ಕ ಶಿಕ್ಷೆ ಆಗಬೇಕಾದುದು ನ್ಯಾಯ. ಆದುದರಿಂದ ಎಲ್ಲಿ ತಪ್ಪಾಗಿದ್ದರೂ ಕೂಡ ಆ ತಪ್ಪನ್ನು ಸರ್ಕಾರ ಅನಾವಶ್ಯಕವಾಗಿ ತನ್ನ ಮೇಲೆ ಹೊರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ತಪ್ಪನ್ನು ಯಾರು ಮಾಡಿರುತ್ತಾರೋ ಅವರ ಮೇಲೆ ಹೊರಿಸಿ ತಕ್ಕ ಶಿಕ್ಷೆ ವಿಧಿಸುವುದರಿಂದ ಪೋಲೀಸ್ ಆಡಳಿತವೇನು ಕೆಟ್ಟುಹೋಗುವುದಿಲ್ಲ. ಇಲ್ಲಿ ಎರಡು ತರಹ ಕೆಡುವುದಕ್ಕೆ ಅವಕಾಶ ಇದೆ. ಪೋಲೀಸರು ಏನು ಮಾಡಿದರೂ ಚೆನ್ನಾಗಿದೆ ಎಂದರೆ ಬೇರೆ ರೀತಿಯಲ್ಲಿ ಕೆಡುತ್ತಾರೆ. ಅವರು ಏನೇ ನ್ಯಾಯ ಮಾಡಿದ್ದರೂ ಕೂಡ ಪ್ರತಿಯೊಂದಕ್ಕೂ ನೇಣು ಹಾಕಿದಾಗಲೂ ಕೆಡಬಹುದು. ಆದುದರಿಂದ, ವಿವೇಚನೆ ಉಪಯೋಗಿಸಿ, ಯಾವ ಪ್ರಕರಣದ ಯೋಗ್ಯತೆ ಏನು ಇದೆ, ಅದನ್ನು ಯಾವ ರೀತಿ ಪರಿಹಾರ ಮಾಡಬೇಕು, ಯಾವ ರೀತಿ ತೀರ್ಮಾನ ಮಾಡಬೇಕೆಂಬ ಜವಾಬ್ದಾರಿ ಮುಖ್ಯ ಮಂತ್ರಿಗಳಿಗೆ ಇದೆ. ಅದನ್ನು ನಾವೇನು ಹೇಳಿಕೊಡಬೇಕಾಗಿಲ್ಲ. ಇಲ್ಲಿ ನಾವು ಹೇಳಬೇಕಾದುದೇನೆಂದರೆ, ಈ ಪ್ರಕರಣ ಯಾವ ಹಂತಕ್ಕೆ ಮುಟ್ಟಿದೆ ಅಂದಾಗ ಇದರಿಂದ ಒಂದು ಸ್ಪಷ್ಟವಾದ ಚಿತ್ರ ಗೊತ್ತಾಗುವುದು ಏನೆಂದರೆ, ಪೋಲೀಸ್ ಕಸ್ಟಡಿಯಲ್ಲಿ ಪೋಲೀಸರ ಅಚಾತುರ್ಯದಿಂದ ತಮ್ಮ ಕರ್ತವ್ಯ ನಿರ್ವಹಣೆ ಮಾಡದೆ ಇರುವುದರಿಂದ ಈ ಘಟನೆ ಸಂಭವಿಸಿದೆ ಎಂಬುದು ಎಂತಹ ಹಸುಗೂಸಿಗೂ ಅರ್ಥವಾಗುತ್ತದೆ. ಈ ಸಂದರ್ಭದಲ್ಲಿ, ಈ ರೀತಿ ಏಕೆ ಆಯಿತು ಎಂಬ ಪ್ರಶ್ನೆ ಬರುತ್ತದೆ. ಕೇವಲ ಒಬ್ಬ ಪೋಲೀಸ್ ಅಧಿಕಾರಿ ಯಾವುದೋ ಒಂದು ಸಣ್ಣ ಕಾರಣಕ್ಕೋಸ್ಕರ ಆ ರೀತಿ ಮಾಡಿದ್ದರೆ ಅವನಿಗೆ ತಕ್ಕ ಶಿಕ್ಷೆಯಾಗಬೇಕು. ಇಲ್ಲಿ ಇನ್ನೊಂದು ಪ್ರಶ್ನೆ ಇದೆ. ಅದೇನೆಂದರೆ, ಆ ಸಾಧು ಏನೋ ಜಾದು ಮಾಡುತ್ತಿದ್ದ. ಅವನ ಹಿಂದೆ ಒಂದು ದೊಡ್ಡ ಜಾಲ ಇದೆ ಮತ್ತು ಅದರ ಹಿಂದೆ ಪ್ರಭಾವಿ ಜನರಿದ್ದಾರೆ ಎಂಬುದು. ಒಂದು ವೇಳೆ ಸಾಧು ಜೀವಂತವಾಗಿ ಉಳಿದರೆ ಅವರೆಲ್ಲ ಹೊರಗೆ ಬರತಕ್ಕ ಪ್ರಸಂಗ ಇದೆ ಎಂಬ ಕಾರಣಕ್ಕಾಗಿ ಪೋಲೀಸ್ ಅಧಿಕಾರಿಗಳ ಮೇಲೆ ಒತ್ತಡ ತಂದು ಆ ಸಾಧುವನ್ನು ಸಾಯಿಸಿರಬಹುದೆಂಬ ಸಂಶಯ ಕೂಡ ಇದೆ. ಇಲ್ಲಿರತಕ್ಕ ಎರಡು ಪ್ರಶ್ನೆಗಳನ್ನು ಬಹಳ ಗಂಭೀರವಾಗಿ ಎಣಿಸಬೇಕಾಗಿದೆ. ಈ ಬಗ್ಗೆ ವಿಚಾರಣೆ ನಡೆಸಲು ಪೋಲೀಸರ ಮೇಲೆ ಪೋಲೀಸರನ್ನು ಹಾಕುತ್ತಾ ಹೋದರೆ ಆ ಸಮಸ್ಯೆ ಬಗೆಹರಿಯುವುದಿಲ್ಲ. ಏಕೆಂದರೆ, ಈಗಾಗಲೇ ಒಂದು ತಪ್ಪಿಗೆ ಹತ್ತು ತಪ್ಪುಗಳು ಆಗಿವೆ. ಆದ್ದರಿಂದ, ಇದು ನಾಳೆ ಕೂಡ ಇದೇ ರೀತಿ ಮುಂದುವರಿಯುತ್ತಾ ಹೋಗುವುದಕ್ಕೆ ಬದಲು ನ್ಯಾಯಾಂಗ ತನಿಖೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಆದರೂ ಕೂಡ ನ್ಯಾಯಾಂಗ ತನಿಖೆಯಿಂದಲೇ ಎಲ್ಲಾ ಆಗಿಬಿಡುತ್ತೆ ಎಂದು ನಾನು ಹೇಳುತ್ತಿಲ್ಲ. ಎಷ್ಟೋ ನ್ಯಾಯಾಂಗ ತನಿಖೆಯಾಗಿರುವುದನ್ನು ಹಿಂದೆಲ್ಲ ನೋಡಿದ್ದೇವೆ. ಆದರೆ ಗತ್ಯಂತರವಿಲ್ಲದೇಯಿರುವುದರಿಂದ ಈಗ ನ್ಯಾಯಾಂಗ ತನಿಖೆಯನ್ನು ಮಾಡಬೇಕು ಎಂದು ಕೇಳುತ್ತಿದ್ದೇವೆ. ಅಥವಾ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಸತ್ಯಾಂಶಗಳನ್ನೂ ಬೇರೆ ರೀತಿಯಲ್ಲಿ ಬಯಲಿಗೆಳೆದು ಈ ಸದನವನ್ನು ಮತ್ತು ಸಾರ್ವಜನಿಕರನ್ನು ತೃಪ್ತಿಪಡಿಸುವಂಥ ಕೆಲಸವನ್ನು ನಿರ್ವಹಿಸುತ್ತೇನೆ ಎಂದು ಹೇಳಿದರೆ ನಾನು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುವುದಿಲ್ಲ. ಈ ಜವಾಬ್ದಾರಿಯನ್ನು ಅವರು ಅನಾವಶ್ಯಕವಾಗಿ ಹೊತ್ತುಕೊಳ್ಳಬಾರದು. ಮಿತ್ರ

ಕ್ಕೆಂದರೆ ಈ ಕಾರ್ಯವನ್ನು ಅವರ ಕೈಯಲ್ಲಿ ನಿರ್ವಹಿಸುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸತಕ್ಕದ್ದು ಒಳ್ಳೆಯದು. ಹಾಗೆ ಮಾಡುವುದರಿಂದ ಸರ್ಕಾರದ ಮೇಲೂ ಯಾವ ಆರೋಪ ಬರುವುದಿಲ್ಲ ಹಾಗೂ ಪೋಲೀಸ್ ವ್ಯವಸ್ಥೆಗೆ ಮತ್ತು ಅವರ ನೈತಿಕ ಸ್ಥೈರ್ಯಕ್ಕೆ ಧಕ್ಕೆಯೂ ಬರುವುದಿಲ್ಲ. ಆದ್ದರಿಂದ, ಈ ವಿಷಯವನ್ನು ಪ್ರತಿಷ್ಠೆ ಎಂದು ಗಣಿಸದೇ ಇದಕ್ಕೆ ತದ್ವಿರುದ್ಧವಾಗಿ ಬರಬಹುದಾದ ಸಲಹೆಗಳನ್ನು ಮಾನ್ಯ ಮಾಡದೇ ನಮ್ಮ ಸಲಹೆಯನ್ನು ಸ್ವೀಕಾರ ಮಾಡಿ ನ್ಯಾಯಾಂಗ ತನಿಖೆಯನ್ನು ಏರ್ಪಡಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಮೊದಲನೆ ದಿವಸ ಚರ್ಚೆ ನಡೆದಾಗ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇದ್ದಿದ್ದರೆ ಎಲ್ಲರ ವಾದವನ್ನು ಕೇಳಿ ಅಂದೇ ನ್ಯಾಯಾಂಗ ತನಿಖೆಗೆ ಒಪ್ಪುತ್ತಿದ್ದರು ಎಂದು ನನಗನ್ನಿಸುತ್ತಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಯಾವ ಒಂದು ಪ್ರತಿಷ್ಠೆಯ ಮೇಲೂ ನಿಲ್ಲದೆ ನ್ಯಾಯಾಂಗ ತನಿಖೆಗೆ ಈ ವಿಚಾರವನ್ನು ಒಳಪಡಿಸುವುದಕ್ಕೆ ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ನಿನ್ನೆ ದಿವಸ ಮತ್ತೆ ಪೋಸ್ಟ್‌ಮಾರ್ಟಂ ಮಾಡಿದರು. ಅದನ್ನು ಸ್ಕೆಲಿಟನ್ ಮೇಲೆ ಮಾಡಿದ್ದಾರೆ. ಮೊದಲು ಡಾ|| ಚಂದ್ರೇಗೌಡ ಅವರು ಶವಪರೀಕ್ಷೆ ಮಾಡಿದ ಮೇಲೆ ಮತ್ತೆ ಎರಡನೇ ಸಾರಿ ಶವಪರೀಕ್ಷೆ ಏತಕ್ಕೋಸ್ಕರ ಮಾಡಿದರು ಎಂಬುದು ಸಂಶಯಕ್ಕೆ ಅವಕಾಶ ಮಾಡಿ ಕೊಟ್ಟಿದೆ. ಬರೀ ಸ್ಕೆಲಿಟನ್ ಮೇಲೆ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ. ಯಾವುದನ್ನೋ ಮುಚ್ಚುವುದಕ್ಕೋಸ್ಕರ ಎರಡನೇ ಸಾರಿ ಶವ ಪರೀಕ್ಷೆ ಮಾಡಿದ್ದಾರೆ ಎಂಬ ವಾದ ಇದೆ. ಕಳೆದ ವರ್ಷ ಪ್ರಭಾಕರ್ ಮತ್ತು ಮೋಹನ್ ಎಂಬುವವರನ್ನು ಪೋಲೀಸರು ಬಂಧಿಸಿದ್ದರು. ಆಗ ಈ ಸಾಧುವೂ ಸೇರಿದಂತೆ ೧೩ ಜನ ಸಾಧುಗಳನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ನಂತರ ಬಿಟ್ಟಿದ್ದರು. ಅವರಲ್ಲಿ ೧೨ ಜನ ಸಾಧುಗಳು ಊರು ಬಿಟ್ಟು ಓಡಿ ಹೋದರು. ಅನಂತರ ಈ ಸಾಧುವಿಗೂ ಮತ್ತು ಪೋಲೀಸರಿಗೂ ನಿಕಟ ಸಂಪರ್ಕ ಬೆಳೆದಿತ್ತು. ಸಾಧು ಭಂಗಿ ಕುಡಿಯುವಾಗ ಪೋಲೀಸರೂ ಜೊತೆಯಲ್ಲಿ ಸೇರಿಕೊಳ್ಳುತ್ತಿದ್ದರು ಎಂದು ಜನ ಹೇಳುತ್ತಿದ್ದಾರೆ. ಇಷ್ಟು ವರ್ಷ ಆದಮೇಲೆ ಈಗ ಈ ಸಾಧುವೇ ಎಲ್ಲದಕ್ಕೂ ಕಾರಣ ಎಂದು ಹೇಳುತ್ತಿದ್ದಾರೆ. ಉಳಿದ ಸಾಧುಗಳು ಏಕೆ ಓಡಿಹೋದರು ? ಅವರು ಊರು ಬಿಟ್ಟು ಓಡಿ ಹೋಗಬೇಕಾದರೆ ಪೋಲೀಸರು ಕಾರಣರೆ ?

ಛೇರ್ಮನ್.—ನೀವು ಕ್ಲಾರಿಫಿಕೇಷನ್ ಕೇಳುತ್ತಿದ್ದೀರೋ ಅಥವಾ ನೀವೇ ಒಂದು ಹೇಳಿಕೆಯನ್ನು ಕೊಡುತ್ತಿದ್ದೀರೋ ?

ಶ್ರೀ ಪಿ ರಾಮದೇವ್.—ಮಾನ್ಯ ಮುಖ್ಯ ಮಂತ್ರಿಗಳು ಏತಕ್ಕೋಸ್ಕರ ನ್ಯಾಯಾಂಗ ತನಿಖೆಗೆ ಒಪ್ಪಬೇಕಾಗಿದೆ ಎಂಬುದಕ್ಕೆ ಹೇಳುತ್ತಿದ್ದೇನೆ. ಪೋಲೀಸ್ ಕಸ್ಟಡಿಯಲ್ಲಿ ಆರೋಪಿಗಳನ್ನು ಪೋಲೀಸರು ಯಾವ ರೀತಿ ನೋಡಿಕೊಳ್ಳುತ್ತಾರೆ, ಅವರ ಬಗ್ಗೆ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ನೋಡಬೇಕೆಂದು ಕೇಳಿಕೊಂಡು ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

CHAIRMAN.—I would like to tell you one thing. So far we have heard so many Hon. Member's views on the statement given by the Hon. Chief Minister. If the occasion demands, I will allow some more time to speak. Now, Sri B. B. Sayanak will speak.

SRI B. B. SAYANAK.—Mr Chairman Sir, this Sadhu Lakshman Giri, whether he is a real Sadhu or not, we have nothing to do about it, but he was taken to the police custody and he died while he was in police custody. That is the most important thing. According to the Official Report and Chief Minister's Statement, it is revealed that there are some injuries on the body. When he is dead what is the necessity for getting the second post-mortem report, after

Dr. Chandre Gowda, an Expert and the Head of the Department has conducted the post-mortem ?

CHAIRMAN.—These points have been dealt with by so many Hon. Members.

SRI B. B. SAYANAK.—I am emphasising for a judicial probe. What was the necessity to order a second post-mortem? As per rumours and also according to me, the Government is pressurising the second doctor to give a favourable report to them. The Inspector General has gone to that Doctor and requested that Doctor in this regard. The apprehension of the Opposition Members is that the Government wants to suppress this case. That is why we want a judicial probe Dr. Chandre Gowda's report has clearly revealed that there were some injuries on the body and my friend Sri Takked says that he has conducted 400 cases, but the thing is that he has not conducted a single murder case. He has only helped the police, because he wants to be in good books with the Chief Minister, I do not know why Sri Devaraj Urs did not make him a Minister. I do not know whether at least Sri Gundu Rao is going to make him a Minister. I request Sir, that there must be a judicial probe so that people are able to know what has happened. There is an apprehension in the minds of the public that the people who go to the police custody will be harmed. I know when Sri Garudachar was a D.I.G. in Belgaum, in 1973 he had mercilessly beaten my people in the custody. I know this Police Officer very well. Therefore I say that not only the Circle Inspector, but also the Police Commissioner Sri Garudachar must be suspended. He is the real culprit. I request the Government to order for a judicial probe.

CHAIRMAN.—I think at this stage we can conclude the subject and ask the Hon. Chief Minister to reply.

KUM. S. PRAMILA.—Sir, I would like to know whether the Hon. Chair is making distinction between Ladies and Gents in allotting time to speak in this House. If so, why the Hon. Chairman is not giving me a chance to speak on this subject ?

CHAIRMAN.—I cannot make any distinction between ladies and gents. I will give a cha ce after Sri Devegowda's turn.

† ಕು॥ ಎಸ್. ಪ್ರಮಿಳಾ (ಚಾಮರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಹಲವಾರು ಸದಸ್ಯರು ಕ್ರಿಮಿನಲ್ ಪ್ರೊಸೀಜರ್‌ನ ಸೆಕ್ಷನ್ ೧೭೬ (೩)ರ ಬಗ್ಗೆ ತಮ್ಮ ವಾದಗಳನ್ನು ಮಾಡಿದ್ದನ್ನು ಕೇಳಿದ್ದೇನೆ. ನಾನೂ ವಕೀಲಿ ವೃತ್ತಿಯಲ್ಲಿರುವುದರಿಂದ ಹೇಳುತ್ತಿದ್ದೇನೆ. ಶವಪರೀಕ್ಷೆ ವರದಿ ಬಗ್ಗೆ ಅನುಮಾನ ಬಂದಾಗ ಮತ್ತೆ ಮರು ಪರೀಕ್ಷೆ ಮಾಡಿಸುವುದಕ್ಕೆ ಅರ್ಜಿ ಹಾಕುತ್ತೇವೆ. ವೈದ್ಯರು ಕೊಟ್ಟಿರುವುದು ತಪ್ಪಿದೆ, ಆದ್ದರಿಂದ ಮತ್ತೆ ಶವ ಪರೀಕ್ಷೆ ಮಾಡಿಸಿ ಎಂದು ಹಿಂದೆ ಬಹಳಷ್ಟು ಸಾರಿ ಕೇಳಿದ್ದೇವೆ. ಸೆಕ್ಷನ್ ೧೭೬ (೩)ರ ಪ್ರಕಾರ ಮರು ಶವ ಪರೀಕ್ಷೆಗೆ ಅರ್ಜಿ ಹಾಕಲು ಅಧಿಕಾರ ಇಲ್ಲ ಎಂಬ ವಾದ ಕಾನೂನು ರೀತ್ಯ ಊರ್ಜಿತ

ವಾಗುವುದಿಲ್ಲ. ಯಾರಿಗೇ ಆಗಲೀ ಅನುಮಾನ ಬಂದರೆ, (ಸಾರ್ವಜನಿಕ ವ್ಯಕ್ತಿಗೆ ಅನುಮಾನ ಬಂದರೂ) ಮತ್ತೆ ಶವ ಪರೀಕ್ಷೆಯನ್ನು ಮಾಡಿಸುವಂತೆ ಅಪ್ಲಿಕೇಷನ್ ಹಾಕುವುದಕ್ಕೆ ಅಧಿಕಾರ ಇದೆ. ಕಾನೂನು ಪ್ರಕಾರ ಎರಡನೇ ಬಾರಿ ಶವ ಪರೀಕ್ಷೆ ಮಾಡುವುದಕ್ಕೆ ಅಧಿಕಾರ ಇದೆ. ಎರಡು ಬಾರಿ ಶವ ಪರೀಕ್ಷೆ ಮಾಡಿದ ವರದಿಗಳು ಬಂದಾಗ, ಡಾ॥ ಚಂದ್ರೇಗೌಡರ ಶವ ಪರೀಕ್ಷೆ ವರದಿಯನ್ನು ಒಪ್ಪಬೇಕೇ ಅಥವಾ ಡಾ॥ ಸೋಮಯ್ಯನವರ ಶವ ಪರೀಕ್ಷೆ ವರದಿಯನ್ನು ಒಪ್ಪಬೇಕೇ ಎಂಬುದನ್ನು ನ್ಯಾಯಾಧೀಶರಿಗೆ ಬಿಡೋಣ.

೫-೦೦ ಪಿ.ಎಂ.

ಇದರಲ್ಲಿ ಅಧಿಕಾರ ಇದೆಯೋ ಇಲ್ಲವೇ ಎನ್ನುವ ಪ್ರಶ್ನೆ ಅಲ್ಲ. ಮರು ಶವಪರೀಕ್ಷೆಗೆ ಅವಕಾಶವಿಲ್ಲವೆನ್ನುವುದು ಕಾನೂನು ಪ್ರಕಾರ ಊರ್ಜಿತವಲ್ಲವೆಂದು ನಾನು ಸ್ಪಷ್ಟವಾದ ಅಭಿಪ್ರಾಯ ಸೂಚಿಸುತ್ತೇನೆ. ಸ್ವಾಮಿ, ಕಳೆದ ೬ ದಿವಸಗಳಿಂದ ಸಾರ್ವಜನಿಕರಲ್ಲಿ ಏನು ಅಭಿಪ್ರಾಯ ಇದೆ ಎಂಬುದನ್ನು ನೋಡಬೇಕು. ಒಬ್ಬ ಸಾಧು ಸತ್ತ. ಆದರೆ ಅವನ ಹಿಂದೆ ಒಂದು ದೊಡ್ಡ ಗ್ಯಾಂಗೇ ಇದೆ. ಈ ಬಗ್ಗೆ ಹಲವಾರು ಜನರಿಂದ ಬಂದಂತ ಪತ್ರಗಳನ್ನು ನಾನು ಪೋಲೀಸ್ ಇಲಾಖೆಗೆ ಕಳುಹಿಸಿಕೊಟ್ಟಿದ್ದೇನೆ. ಸಾಧು ಹಿಂದೆ ಬಹಳಷ್ಟು ಜನ ಇದ್ದಾರೆ. ಇನ್ನು ಮುಂದೆಯೂ ಮಕ್ಕಳ ಕೊಲೆ ನಡೆಸಲಿಕ್ಕೆ ಅವರು ತಯಾರಿದ್ದಾರೆ. ಅತ್ಯಂತ ಪ್ರಾಮುಖ್ಯವಾದ ವಿಷಯವನ್ನು ಮುಂದುವರಿಸಿಕೊಂಡು ಹೋಗುವುದರಿಂದ ಪೋಲೀಸಿನವರು ಮುಂದೆ ತನಿಖೆ ಮಾಡುವುದನ್ನು ನಿಲ್ಲಿಸಿಬಿಟ್ಟು ಸಾರ್ವಜನಿಕರ ಆಪಾದನೆಗಳನ್ನು ದೂರ ಮಾಡುತ್ತಾರೆ. ಆಗ ಪೋಲೀಸಿನವರನ್ನು ಡೀಮಾರಲೈಸ್ ಮಾಡಿದಂತಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸಿ, ಮುಂದೆ ನ್ಯಾಯವಾದ ತನಿಖೆಯನ್ನು ನಡೆಸುವುದಕ್ಕೆ ಆಸ್ಪದ ಮಾಡಿಕೊಡಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷರೇ, ಸಾಧುವಿನ ಪ್ರಕರಣದ ಬಗ್ಗೆ ಕಳೆದ ೬-೭ ದಿವಸಗಳಿಂದ ಚರ್ಚೆಯಾಗುತ್ತಿದೆ. ಈ ಪ್ರಕರಣದ ಚರ್ಚೆಯನ್ನು ಮುಂದುವರಿಸದೆ ಇಲ್ಲಿಗೆ ನಿಲ್ಲಿಸಬೇಕೆಂದರಲ್ಲದೆ ಇದರಿಂದ ಪೋಲೀಸಿನವರ ಮೇಲೆ ಡೀಮಾರ್‌ಲೈಸ್ ಆಗುತ್ತದೆಂದು ನಮ್ಮ ಸೋದರಿಯವರು ಹೇಳಿದರು. ಪೋಲೀಸಿನವರು ಡೀಮಾರಲೈಸ್ ಆಗುವಂತಹ ಯಂತ್ರವಲ್ಲ. ರಾಜ್ಯದಲ್ಲಿ ಪೋಲೀಸ್ ಇಲಾಖೆಯಿಂದ ನಡೆದಿರತಕ್ಕ ಹಲವಾರು ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆದಿರತಕ್ಕಂಥಾದ್ದನ್ನು ನಿಮ್ಮ ಜ್ಞಾಪಕಕ್ಕೆ ತರುತ್ತೇನೆ. ಪೋಲೀಸ್ ಇಲಾಖೆಗೆ ರಕ್ಷಣೆ ಕೊಡತಕ್ಕ ಸರ್ಕಾರ ಇರುವವರಿಗೆ ಡಿಮಾರಲೈಸ್ ಅಂತ ತಾವು ತಿಳಿದುಕೊಂಡಿದ್ದರೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡಬೇಕಾಗಿದೆ. ಜನತೆಯ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವನ್ನು ನಾವು ಮರೆಯಬಾರದು. ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕೂತು ಕೆಲಸ ಮಾಡುವಂತೆ; ಆಳುವ ಪಕ್ಷ ಕಾನೂನು ಪಾಲನೆ ಮಾಡತಕ್ಕ ಜವಾಬ್ದಾರಿ ಹೊತ್ತಿರತಕ್ಕಂಥ ಕಾಲದಲ್ಲಿ, ಕಾನೂನು ಪರಿಪಾಲನೆ ಮಾಡುವಾಗ ಈ ದೇಶದ ಜನತೆಯ ವಿಶ್ವಾಸಕ್ಕೆ ಪಾತ್ರರಾಗತಕ್ಕಂಥಾದ್ದು ಅವರ ಜವಾಬ್ದಾರಿ. ಸ್ವಾಮಿ, ಮುಖ್ಯಮಂತ್ರಿಗಳು ಬಹುಶಃ ಬಿಚ್ಚು ಮನಸ್ಸಿನಿಂದ ಈ ಸಭೆಗೆ ವರದಿಯನ್ನು ಕೊಟ್ಟಿದ್ದಾರೆ. ಶವ ಪರೀಕ್ಷೆಯ ವರದಿ ಅವರ ಕೈ ತಲುಪಿದ ಮೇಲೆ ಅವರು ಕೊಟ್ಟಂತಹ ವಾಗ್ದಾನದ ಪ್ರಕಾರ ಅವಧಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಚರ್ಚೆಯ ಪ್ರಥಮ ಹಂತದಲ್ಲಿ ಸುಮಾರು ೫-೬ ದಿವಸಗಳ ಹಿಂದೆ ಚರ್ಚೆ ನಡೆದಾಗ ನಾವು ಮುಖ್ಯಮಂತ್ರಿಗಳಿಗೆ ಏನು ಸೂಚನೆ ಕೊಟ್ಟೆವು ಎಂದರೆ, ಇದರಲ್ಲಿ ಸಂಶಯಕ್ಕೆ ಸಾಕಷ್ಟು ಅವಕಾಶ ಇದೆ, ಸಂಶಯ ನಿವಾರಣೆ ಮಾಡುವ ದೃಷ್ಟಿಯಿಂದ ತಾವು ನಿಷ್ಪಕ್ಷಪಾತವಾದ ತನಿಖೆ ಮಾಡಿಸಿರೆಂದು. ಅಲ್ಲದೆ, ತಮ್ಮ ಅಧೀನದಲ್ಲಿಯೇ ಇರತಕ್ಕ ಸಿ.ಓ.ಡಿ. ಇಲಾಖೆಯ ಮೂಲಕ ಶವವನ್ನು ಹೊರತೆಗೆಸಿ ಮರು ಪರೀಕ್ಷೆ ಮಾಡಿಸಿ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಕೊಟ್ಟಿರತಕ್ಕ ಉತ್ತರದಲ್ಲಿ ಇದರ ಬಗ್ಗೆ ಯಾವ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಅವರು ಮೌನ ತಾಳಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ನ್ಯಾಯಾಂಗ ತನಿಖೆ ಆದರೆ ಸಂಶಯಕ್ಕೆ ಪರಿಹಾರ ಸಿಗುತ್ತದೆ ಎಂದು ನಾನು ಭಾವಿಸಿಕೊಂಡಿಲ್ಲ. ಎಲ್ಲಿಯವರೆಗೆ ನಿಮ್ಮ ಮನಸ್ಸಿನಲ್ಲಿ ಈ ಇಲಾಖೆಯ ಆಡಳಿತವನ್ನು ಚುರುಕುಗೊಳಿಸಿ, ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರರಾಗುವ ಕಾಳಜಿ ಇರುವುದಿಲ್ಲವೋ, ಹಾಗೂ ಆಡಳಿತಯಂತ್ರವನ್ನು ತಾವು ಎಲ್ಲಾ ರೀತಿಯಿಂದಲೂ ಸಮರ್ಥಿಸಿಕೊಂಡು ಅಮರಾಳಿಗಳನ್ನು ಸಂದರ್ಭ ಬಂದಾಗ ದಮನ

ಮಾಡತಕ್ಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನ್ಯಾಯಾಂಗ ತನಿಖೆಯಿಂದಾಗಲೀ ಅಥವಾ ಇನ್ನಾವುದೇ ತನಿಖೆಯಿಂದಾಗಲೀ ಪರಿಹಾರ ಸಿಕ್ಕುತ್ತದೆ ಎಂದು ನಾನು ಭಾವಿಸುವುದಿಲ್ಲ.

ಸ್ವಾಮಿ, ಇನ್ನೂ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನನ್ನ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಡತಕ್ಕ ಕಾಲದಲ್ಲಿ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕಳೆದ ೬ ದಿವಸಗಳಿಂದಲೂ ಸಾಧು ಸಾವಿನ ಬಗ್ಗೆ ಪತ್ರಿಕೆಗಳಲ್ಲಿ ಬರತಕ್ಕ ಎಲ್ಲಾ ಸುದ್ದಿಗಳನ್ನು ಸಂಗ್ರಹ ಮಾಡಿದ್ದರೆ ಅವುಗಳನ್ನು ದಯವಿಟ್ಟು ಅವಲೋಕನ ಮಾಡಬೇಕು. ಆ ಪತ್ರಿಕೆಗಳೇನು ಸಣ್ಣಪುಟ್ಟ ಪತ್ರಿಕೆಗಳಲ್ಲ; ಅವು ತನ್ನದೇ ಆದಂಥ ಒಂದು ಸ್ಥಾನಮಾನವನ್ನು ಗಳಿಸಿಕೊಂಡಿರತಕ್ಕಂಥ ಪತ್ರಿಕೆಗಳು. ಸ್ವಾಮಿ, ಈ ಒಂದು ಪ್ರಕರಣದಲ್ಲಿ ಯಾವ ಆಧಾರದ ಮೇಲೆ ಯಾವ ಉದ್ದೇಶದ ಮೇಲೆ ಆ ಶವವನ್ನು ಹೊರಗೆ ತೆಗೆಸತಕ್ಕ ತೀರ್ಮಾನವನ್ನು ಮ್ಯಾಜಿಸ್ಟ್ರೇಟು ಮಾಡಿದರು. ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಇದರಿಂದ ಒಂದು ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಪೋಲೀಸ್ ಸ್ಟೇಷನ್ನಿನಲ್ಲಿ ಪೋಲೀಸಿನವರ ಒಂದು ಅಚಾತುರ್ಯಕ್ಕೆ ತುತ್ತಾಗಿ ಸತ್ತುಹೋದಂತಹ ಸಾಧುವಿನ ವಿಚಾರವನ್ನು ಮುಚ್ಚಿಕೊಳ್ಳುವುದಕ್ಕೆ ಮೊದಲನೆಯ ಶವಪರೀಕ್ಷೆಯ ವರದಿ ಸಹಾಯವಾಗಲಿಲ್ಲ; ಆದ್ದರಿಂದ ಮತ್ತೊಂದು ಸಾರಿ ಶವ ಪರೀಕ್ಷೆಗೆ ಒಳಪಡಿಸುವಂತೆ ಮಾಡಿರಬೇಕೆಂಬ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳ ಅತಿ ಹೆಚ್ಚಿನ ವರ್ತನೆಯಿಂದ ಅಮಾಯಕ ತುತ್ತಾಗಿದ್ದಂಥ ಒಬ್ಬ ವ್ಯಕ್ತಿ ಸತ್ತಿದ್ದಾನೆ. ಶವ ಪರೀಕ್ಷೆ ಮಾಡತಕ್ಕ ಡಾಕ್ಟರ ಮೇಲೆ ಪ್ರಭಾವ ಬೀರಲು ಪೋಲೀಸ್ ಅಧಿಕಾರಿಗಳು ಬಹಳ ಪ್ರಯತ್ನ ನಡೆಸಿದರು; ಅವರ ಪ್ರಯತ್ನ ಸಫಲವಾಗಲಿಲ್ಲ. ಪೋಲೀಸ್ ಠಾಣೆಯಲ್ಲಿ ಯಾವ ವ್ಯಕ್ತಿ ಸತ್ತಿದ್ದಾನೆ ಸಾವಿನ ತುತ್ತಾಗಿದ್ದಾನೋ ಅವನ ಶವ ಪರೀಕ್ಷೆ ನಡೆಸಿದಂಥ ಡಾಕ್ಟರ ವರದಿಯಿಂದ ಪೋಲೀಸ್ ಠಾಣೆಯ ಮೇಲೆ ಗೂಬೆ ಕೂರಿಸತಕ್ಕ ಸನ್ನಿವೇಶ ಬಂತು. ಅದನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗಿ ಮತ್ತೊಂದು ವರದಿ ತರಿಸಿಕೊಳ್ಳಬೇಕು ಎಂದು ಪ್ರಯತ್ನ ನಡೆಯಿತು. ಇದು ಒಂದು ಭಾಗ. ಮತ್ತೊಂದು ವಿಚಾರವೇನೆಂದರೆ, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟು ಕೊಟ್ಟಿರತಕ್ಕ ವರದಿಯಲ್ಲಿ, ಯಾವ ರೀತಿಯ ಗಾಯಗಳೂ ಇರಲಿಲ್ಲ. ಆದರೆ, ಮರಣಸ್ಥಳದಲ್ಲಿ ನನಗೆ ಬೇರೆ ರೀತಿ ಬಂದು ಹೇಳಿದ್ದಾರೆ. ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಹತ್ತಿರ ಹೋಗಿ, ಶವದ ಬಗ್ಗೆ ತನಿಖೆ ಮುಂದುವರಿಸುವುದಕ್ಕೆ ಸಾಧ್ಯವಿಲ್ಲವೇ ಎಂದು ಮನವಿ ಮಾಡಿಕೊಂಡಿದ್ದಾರೆ. ನಾನು ಮಾಡಿಕೊಟ್ಟಿರತಕ್ಕ ವರದಿಗೂ, ಶವಪರೀಕ್ಷೆ ಮಾಡಿರುವ ಡಾಕ್ಟರು ಕೊಟ್ಟಿರತಕ್ಕ ವರದಿಗೂ ವ್ಯತ್ಯಾಸವಿದೆ, ಆದ್ದರಿಂದ ನನ್ನ ವರದಿ ಗಮನಕ್ಕೆ ಕೊಡಬೇಕು; ಆದಕಾರಣ ನಾನು ಮುಂದಕ್ಕೆ ತನಿಖೆ ನಡೆಸುತ್ತಿಲ್ಲವೆಂದು ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ವಿನಂತಿಸಿಕೊಂಡಿದ್ದಾರೆ. ಪಂಚನಾಮೆ ವರದಿ ಕೊಟ್ಟಿರತಕ್ಕ ಮಾನ್ಯ ಸಂಗಪ್ಪನವರು ಈ ರೀತಿ ಮಾಡಿದ್ದಾರೆ. ಇವತ್ತು ಮತ್ತೊಮ್ಮೆ ಶವ ಪರೀಕ್ಷೆ ಮಾಡಿಸುವುದರ ಮುಖಾಂತರ ತಾವು ಮಾಡಿರತಕ್ಕ ತಪ್ಪನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನ ನಡೆದಿದೆ. ಇದಕ್ಕೆ ಸರ್ಕಾರದ ಅಭಿಮಾನದ ಇದೆಯೋ ಏನೋ ಗೊತ್ತಿಲ್ಲ. ಈ ಹಂತದಲ್ಲಿ ನಾನು ಏನೂ ಹೆಚ್ಚಿಗೆ ಹೇಳುವುದಕ್ಕೆ ತಯಾರಿಲ್ಲ. ಇವತ್ತು ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೀರಿ, ಸಾಧುವಿನ ಶವದ ಮರು ಪರೀಕ್ಷೆ ಮಾಡಬೇಕೆಂದು ಡಾಕ್ಟರ ಮೇಲೆ ಒತ್ತಡ ತರುವ ಪ್ರಯತ್ನ ಈಗಾಗಲೇ ನಡೆದಿದೆ. ೧೧-೬-೮೦ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಸಾಧು ಬಾಬಾ ಲಕ್ಷ್ಮಣಗಿರಿಯ ಮೃತ ದೇಹದ ಮರು ಪರೀಕ್ಷೆ ನಡೆಸಿದ ಮೈಸೂರು ವೈದ್ಯಕೀಯ ಕಾಲೇಜಿನ ಫೋರೆನ್ಸಿಕ್ ಪ್ರೊಫೆಸರ್ ಡಾ. ಸೋಮಯ್ಯ ಅವರ ಮೇಲೆ ಪ್ರಭಾವ, ಒತ್ತಡಗಳು ಪೋಲೀಸ್ ಅಧಿಕಾರಿಗಳಿಂದ ಶುರುವಾಗಿದೆ ಎಂದು ನಂಬಲರ್ಹವಾದ ಮೂಲಗಳಿಂದ ಗೊತ್ತಾಗಿದೆ. ನಗರದ ಒಬ್ಬರು ಐ.ಪಿ.ಎಸ್. ಅಧಿಕಾರಿಯೊಬ್ಬರು ಹಾಗೂ ಒಬ್ಬ ಡಿ.ಎಸ್.ಪಿ. ಯವರು ಡಾ. ಸೋಮಯ್ಯ ಅವರ ಹಿಂದೆ ಬಿದ್ದಿದ್ದಾರೆಂದು ಗೊತ್ತಾಗಿದೆ. ಸ್ವಾಮಿ, ನಿನ್ನೆ ಶವವನ್ನು ಹೊರಗೆ ತೆಗೆದರು, ಅಲ್ಲಿಗೆ ಯಾವ ಪತ್ರಿಕಾಕರ್ತರನ್ನೂ ಬಿಡಲಿಲ್ಲ. ಶವವನ್ನು ಹೊರಗೆ ತೆಗೆದ ಮೇಲೆ ಪತ್ರಿಕಾಕರ್ತರನ್ನು ಬಿಡದೇ ಇರುವುದಕ್ಕೆ ಕಾರಣವೇನು ? ಅಲ್ಲಿ ಛಾಯಾ ಚಿತ್ರಗಳನ್ನು ತೆಗೆಯಲು ಅವಕಾಶ ಕೊಡದೇ ಇರುವುದಕ್ಕೆ ಕಾರಣವೇನು ? ಇದರ ಹಿನ್ನೆಲೆ ಏನು ? ನನಗಂತೂ ಇದು ಅರ್ಥವಾಗುವುದಿಲ್ಲ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಈ ಸಮಸ್ಯೆಯನ್ನು ಬಗೆಹರಿಸುತ್ತಾರೆಂದು ನಾನು ಆಶಿಸುತ್ತೇನೆ. ಇಷ್ಟೊಂದು ಸಾರ್ವತ್ರಿಕವಾದ, ಸಾರ್ವಜನಿಕ ಕುತೂಹಲವನ್ನು ಕೆರಳಿಸಿರತಕ್ಕಂಥಾದ್ದರ ಕಡೆಗೆ ವರದಿಗಾರರನ್ನೂ ಹಾಗೂ ಛಾಯಾಚಿತ್ರಗಾರರನ್ನು ಬಿಡತಕ್ಕಂಥ ಅವಶ್ಯಕತೆ ಇತ್ತು, ಅವರೂ ಏಕೆ ಬಿಡಲಿಲ್ಲ ಬಹುಶಃ ಇದು ಮರೆಮಾಚುವ ಪ್ರಯತ್ನ ಅಂತ ಹೇಳಿದರೆ ಇದು ಅಲ್ಲಗಳೆಯತಕ್ಕ ಮಾತಲ್ಲ ಎಂದು ಇಷ್ಟು ಮಾತ್ರ ಮುಖ್ಯ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ಪೋಲೀಸ್ ಕಮಿಷನರ್‌ರವರಿಂದ ಹಿಡಿದು ಹಿರಿಯ ಪೋಲೀಸ್ ಅಧಿಕಾರಿಗಳು ಪದೇ ಪದೇ ಹೆಣದ ಮನೆಗೆ ಬಂದು ಹೋಗುತ್ತಿದ್ದಾರೆಂದು ವೈದ್ಯರೊಬ್ಬರು ಆಕ್ಷೇಪಿಸಿದ್ದಾರೆಂದು ೭ನೇ ತಾರೀಖಿನ ಕನ್ನಡ ಪ್ರಭಾ ಪತ್ರಿಕೆಯಲ್ಲಿ ವರದಿಯಾಗಿದೆ. ಆ ದಿನವೇ ಪೋಲೀಸ್ ಕಮಿಷನರ್ ಶ್ರೀ ಗರುಡಾಚಾರ್‌ರವರು ಸುದ್ದಿಗಾರರಿಗೆ ತಿಳಿಸಿರುವುದಾಗಿ ಪತ್ರಿಕೆಯಲ್ಲಿ ಬಂದಿದೆ. ''ಸಾಧು ಬಾಬಾ ಲಕ್ಷ್ಮಣಗಿರಿ ಪೋಲೀಸರ ಚಿತ್ರಹಿಂಸೆಯಿಂದ ಮೃತರಾದದ್ದು ನಿಜವಾದರೆ, ಸಂಬಂಧಿಸಿದ ಪೋಲೀಸರ ವಿರುದ್ಧ ಕೊಲೆ ಆರೋಪದ ಮೇಲೆ ಕ್ರಮ ಕೈಗೊಳ್ಳುವ'' ಆಶ್ವಾಸನೆಯನ್ನು ಪೋಲೀಸ್ ಕಮಿಷನರ್ ಶ್ರೀ ಬಿ.ಎನ್. ಗರುಡಾಚಾರ್ ಅವರು ನೀಡಿದ್ದಾರೆ. ಕೊಲೆ ಆರೋಪದ ಮೊಕದ್ದಮೆ ಕೂಡ ಹೂಡುತ್ತೇವೆಂದು ಹೇಳಿದ್ದಾರೆ. ಆದರೆ ಏನು ಮಾಡಿದ್ದಾರೆ ? ತಜ್ಞರ ವರದಿ ಪ್ರಕಾರ ಗಾಯಗಳು ಇದ್ದವು ಎಂದು ಇದೆ, ಮೂರು ನಮೂನೆಯ ಗಾಯಗಳಿರುತ್ತವೆಂದು ಮಾನ್ಯ ಸ್ನೇಹಿತರೊಬ್ಬರು ಹೇಳಿದರು. ತಾವು ಮೊನ್ನೆ ಈ ಸಭೆಯಲ್ಲಿದ್ದಿರಿ ಎಂದು ಭಾವಿಸಿಕೊಂಡಿದ್ದೇನೆ. ಪೋಲೀಸ್ ಕಮಿಷನರ್ ಅವರು ಸಾಧುವಿನ ಶವವನ್ನು ನೋಡಿದ ಮೇಲೆ ಅವರ ಕಣ್ಣಿಗೆ ಗೋಚರಿಸುವಂತ ಗುರುತುಗಳು ಇದ್ದುದರ ಬಗ್ಗೆ ತಮಗೆ ಏನಾದರೂ ಮಾಹಿತಿ ಕೊಟ್ಟಿದ್ದಾರೆಯೇ ? ಕೊಡದೇ ಇದ್ದರೆ ಅದಕ್ಕೆ ಕಾರಣವೇನು ? ತಮಗೆ ಏನು ವರದಿ ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದಕ್ಕೆ ತಾವು ಮೌನ ತಾಳಿದಿರಿ. ತಮಗೆ ಇರತಕ್ಕ ಕಷ್ಟ ಏನು ಎಂದು ನನಗೆ ಗೊತ್ತಾಗಲಿಲ್ಲ. ಸಾಧುವಿನ ಶವ ಪರೀಕ್ಷೆಯ ವರದಿಯನ್ನು ಕೊಟ್ಟ ಮೇಲೆ ಪೋಲೀಸ್ ಕಮಿಷನರ್ ಅವರು ಹಲವಾರು ಸಾರಿ ಶವ ಇದ್ದಂತಹ ಜಾಗಕ್ಕೆ ಹೋಗಿ ನೋಡಿಕೊಂಡು ಬಂದ ಮೇಲೆ ತಮಗೆ ಏನು ವರದಿ ಕೊಟ್ಟಿದ್ದಾರೆ ? ಅವರು ತಮ್ಮ ಕರ್ತವ್ಯವನ್ನು ಯಾವ ರೀತಿ ಪಾಲನೆ ಮಾಡಿದ್ದಾರೆ ? ಇದರ ಬಗ್ಗೆ ತಾವು ಉತ್ತರ ಕೊಡತಕ್ಕ ಕಾಲದಲ್ಲಿ ದಯಮಾಡಿ ಈ ಸಭೆಗೆ ತಿಳಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಸ್ವಾಮಿ, ೫ನೇ ಮಾರ್ಚ್ ೧೯೮೦ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಮತ್ತೊಂದು ವಿಷಯ ಪ್ರಕಟವಾಗಿದೆ. ಅದೇನೆಂದರೆ, ''ಪೋಲೀಸರಿಗೆ ಇನ್ನೂರು ರೂಪಾಯಿ ಲಂಚ ಕೊಟ್ಟು ಎರಡು ತಿಂಗಳ ಹಿಂದೆ ಸಾಧು ಬಂಧವಿಮುಕ್ತನಾಗಿದ್ದನೆಂದು ಆರೋಪಿಗಳಲ್ಲಿ ಒಬ್ಬನಾದ ಷಣ್ಮುಗಂ ಪೋಲೀಸ್ ಕಮಿಷನರ್ ಸಮಕ್ಷಮವೇ ಪತ್ರಿಕಾ ಪ್ರತಿನಿಧಿಗಳಿಗೆ ನಿನ್ನೆ ತಿಳಿಸಿದ'' ಎಂದು ಅದನ್ನು ಪೋಲೀಸ್ ಕಮಿಷನರ್ ಕೂಡ ಅಲ್ಲಗಳೆದಿಲ್ಲ. ಅಂದಾಗ ಪೋಲೀಸ್ ಕಮಿಷನರ್ ಅವರು ಕರ್ತವ್ಯ ಲೋಪ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ವಿಷಯವನ್ನು ಕಳೆದ ೫-೬ ದಿವಸಗಳಿಂದ ಈ ಸದನದಲ್ಲಿ ಹೇಳುತ್ತಲೇ ಇದ್ದರೂ ತಾವು ಒಂದು ರೀತಿಯ ಉದಾಸೀನ ಭಾವನೆ ತಳೆದಿದ್ದೀರಿ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ.

ಸ್ವಾಮಿ, ೮-೩-೮೦ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಮತ್ತೊಂದು ವಿಷಯ ವರದಿಯಾಗಿದೆ. ಅದೇನೆಂದರೆ, ''ಸರ್ಕಾರದಿಂದ, ಹಿರಿಯ ಅಧಿಕಾರಿಗಳಿಂದ ರಕ್ಷಣೆಯ ಭರವಸೆ ಹಾಗೂ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಿಲ್ಲ ಎಂಬ ಖಚಿತ ಆಶ್ವಾಸನೆ ಸಿಕ್ಕರೆ, ಸಾಧು ಬಾಬಾ ಅನುಭವಿಸಿದ ''ಚಿತ್ರಹಿಂಸೆ'' ಯನ್ನು ಕಣ್ಣಾರೆ ನೋಡಿದ ಕೆಲ ಪೋಲೀಸರೇ ತನಿಖೆ ಕಾಲದಲ್ಲಿ ಸಾಕ್ಷ್ಯ ನೀಡಲು ಸಿದ್ಧರಿದ್ದಾರೆ'' ಎಂಬುದು ಇಷ್ಟೆಲ್ಲಾ ವಿಚಾರಗಳು ಪತ್ರಿಕೆಗಳಲ್ಲಿ ಬಂದಿವೆ. ಆದ್ದರಿಂದ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕೆಂದು ವಿರೋಧ ಪಕ್ಷದ ಕಡೆಯಿಂದ ನಾವು ಸೂಚನೆ ಕೊಟ್ಟೆವು. ಇದರಲ್ಲಿ ಸರ್ಕಾರದ ಜವಾಬ್ದಾರಿ ಇದೆಯೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಒಬ್ಬ ಸಾಧುವಿನ ಪ್ರಶ್ನೆ ಇರಬಹುದು, ನಾಳೆ ದಿವಸ ನಾಗರೀಕನೊಬ್ಬ ಅಪಾದನೆಗೆ ಗುರಿಯಾಗಿ ಪೋಲೀಸ್ ಠಾಣೆಗೆ ಹೋದಾಗ, ಆತನ ಮೇಲೆ ಯಾವುದೇ ರೀತಿಯಾದಂತಹ ಕಿರುಕುಳ ಕಾನೂನಿಗೆ ವಿರುದ್ಧವಾಗಿ ಪೋಲೀಸ್ ಠಾಣೆಯಲ್ಲಿ ನಡೆಯಬಾರದು. ಜನರ ವಿಶ್ವಾಸವನ್ನು ಗಳಿಸಿಕೊಂಡು ಈ ಇಲಾಖೆ ಕೆಲಸ ಮಾಡಬೇಕೆನ್ನುವ ವಿಚಾರವನ್ನು ತಾವು ಒಪ್ಪುತ್ತೀರೆಂದು ನಾನು ಆಶಿಸುತ್ತೇನೆ. ಇಲಾಖೆ, ಸಾರ್ವಜನಿಕರ ವಿಶ್ವಾಸ ಗಳಿಸದೇ ಹೋದರೆ ನಾನು ಮೊದಲೇ ಹೇಳಿದ ಹಾಗೆ ಇಲಾಖೆಯ ಬಗ್ಗೆ ಇರತಕ್ಕ ಗೌರವ ಕಡಿಮೆಯಾಗುತ್ತದೆ. ಈ ಇಲಾಖೆಯನ್ನು ರಾಜಕಾರಣಿಗಳ ಒಂದು ಆಶ್ರಯದಲ್ಲಿಯೇ ನಡೆಸಿಕೊಂಡು ಹೋಗಬೇಕಾಗುತ್ತದೆ. ತಾವು ಈ ಇಲಾಖೆಯ ಅಧಿಕಾರಿಗಳಿಗೆ ಎಲ್ಲಿಯವರೆಗೆ ರಕ್ಷಣೆ ಕೊಡುತ್ತೀರಿ, ಅಲ್ಲಿಯವರೆಗೆ ಸಾರ್ವಜನಿಕರಿಗೆ ಈ ಇಲಾಖೆಯ ಬಗ್ಗೆ ಗೌರವ ಇರುವುದಿಲ್ಲ. ಇಂದಲ್ಲ ನಾಳೆ ಅದರ ಪರಿಣಾಮ ಭೀಕರವಾಗುತ್ತದೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೂ ಹಲವಾರು ಪ್ರಕರಣಗಳ ಬಗ್ಗೆ ವರದಿಯಾಗಿವೆ. ಮಾನ್ಯ ಮಿತ್ರರಾದ ಲಕ್ಷ್ಮೀಸಾಗರ್‌ರವರು ಇನ್ನೂ ಮೂರು ಪ್ರಕರಣಗಳ ಬಗ್ಗೆ ಈಗಾಗಲೇ ಹೇಳಿದ್ದಾರೆ. ೯-೩-೮೦ರ ಕನ್ನಡ ಪ್ರಭಾ

ಪತ್ರಿಕೆಯಲ್ಲಿ, ಅಶೋಕನಗರ ಪೋಲೀಸ್ ಠಾಣೆಯಲ್ಲಿ (ಕೊಲೆ) ಕುಟ್ಟಿ ಎಂಬ ಆಪಾದಿತ ಮೃತಪಟ್ಟಿದ್ದು, ಕಮರ್ಷಿಯಲ್ ಸ್ಟ್ರೀಟಿನ ಪೋಲೀಸ್ ಠಾಣೆಯಲ್ಲಿ ಕಳ್ಳತನದ ಆರೋಪದ ಮೇಲೆ ದಸ್ತಗಿರಿಗೊಳಗಾಗಿದ್ದ ಯುವಕನೊಬ್ಬ ಸಾವನ್ನಪ್ಪಿದ್ದು, ಜಯನಗರ ಠಾಣೆಯಲ್ಲೂ ಇಂಥ ಪ್ರಕರಣ ಒಂದು ನಡೆದಿತ್ತು ಎಂದು ವರದಿಯಾಗಿದೆ. ಪ್ರಾಸಂಗಿಕವಾಗಿ ಇದಕ್ಕೂ ಅದಕ್ಕೂ ಸಂಬಂಧ ಇಲ್ಲ. ಆದರೆ, ಇಷ್ಟು ಮಾತ್ರ ಹೇಳುತ್ತೇನೆ, ಇವತ್ತು ತಮ್ಮ ಮೇಲೆ ದೊಡ್ಡ ಜವಾಬ್ದಾರಿ ಇದೆಯೆನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಮೊನ್ನೆ ಕೂಡ ಛಾಯಾ ಚಿತ್ರಗ್ರಾಹಕರು ಕೋರ್ಟಿನ ಮುಂದೆ ಹೋದಾಗ ಪೋಲೀಸರು ಹೊಡೆದರು ಎಂಬ ಸುದ್ದಿ ಬಂದಿದೆ. ಇಷ್ಟೆಲ್ಲಾ ಘಟನೆಗಳು ನಡೆದಿರುವುದರಿಂದ ನಿಮ್ಮ ಮೇಲೆ ದೊಡ್ಡ ಜವಾಬ್ದಾರಿಯಿದೆ ಎಂದು ಹೇಳುತ್ತಿದ್ದೇನೆ. ಸಾಧುವಿನ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ೪-೬ ಜನ ಅಧಿಕಾರಿಗಳಿದ್ದರೂ ಕೇವಲ ಒಬ್ಬ ವ್ಯಕ್ತಿಯನ್ನು ಸಸ್ಪೆಂಡ್ ಮಾಡಿರುವುದು ನಮಗೆ ಸಮಾಧಾನವಿಲ್ಲ. ಇವತ್ತು ಇಲಾಖೆಯ ಮೇಲೆ ಸಂಶಯ ಇರತಕ್ಕ ಆರೋಪ ಬಂದಿದೆ ಆದರಿಂದ ಇಲಾಖೆ ವಿಮುಕ್ತವಾಗಬೇಕು. ಹಾಗೆ ವಿಮುಕ್ತವಾಗಬೇಕಾದರೆ ನಿಷ್ಪಕ್ಷಪಾತವಾದ ವಿಚಾರಣೆಯನ್ನು ತೀವ್ರ ಮಾಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕ ಜವಾಬ್ದಾರಿ ತಮ್ಮ ಮೇಲಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸಿ, ಮಾನ್ಯ ಮುಖ್ಯ ಮಂತ್ರಿಗಳು ಯಾವುದೇ ಪೂರ್ವಾಭಾವಿ ಅಭಿಪ್ರಾಯಕ್ಕೂ ಬರದೇ ವಿರೋಧ ಪಕ್ಷದ ಸದಸ್ಯರು ತಿಳಿಸಿರತಕ್ಕ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಅಂತಿಮ ನಿರ್ಣಯ ತಾಳುತ್ತಾರೆಂದು ಭಾವಿಸುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೆ, ಸುಮಾರು ಎರಡು ಗಂಟೆಗಳ ಕಾಲದಿಂದಲೂ 'ಸಾಧು ಕೊಲೆ' ಎಂದು ಪತ್ರಿಕೆಯಲ್ಲಿ ಬಂದಿರುವ ಬಗ್ಗೆ ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಮೊನ್ನೆ ಶುಕ್ರವಾರದ ದಿವಸ ಒಂದು ಹೇಳಿಕೆಯನ್ನು ಕೊಡುವಾಗ ಸರ್ಕಾರ ಯಾವುದೇ ಒಂದು ವಿಷಯವನ್ನು ಮುಚ್ಚಿಡುವ ಉದ್ದೇಶದಿಂದ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದರಲ್ಲಿ ಏನು ತಪ್ಪು ನಡೆದಿದೆ ಎಂಬ ಬಗ್ಗೆ ನಿರ್ಧಿಷ್ಟವಾದ ವರದಿ. ನಿಖರವಾದಂಥ ವರದಿ ಸರ್ಕಾರಕ್ಕೆ ಬಂದಮೇಲೆ ಆ ವರದಿಯನ್ನು ಅನುಸರಿಸಿ ಸೂಕ್ತ ಕ್ರಮವನ್ನು ಸಾರ್ವಜನಿಕರ ದೃಷ್ಟಿಯಿಂದಲೂ ಮತ್ತು ಆಡಳಿತದ ದೃಷ್ಟಿಯಿಂದಲೂ ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಭರವಸೆಯನ್ನು ಕೊಟ್ಟಿದ್ದೆ. ನಾನು ಅವತ್ತು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ವರದಿಯನ್ನು ಓದಿದ್ದೇನೆ. ಅನಂತರ ಪೋಸ್ಟ್ ಮಾರ್ಟಮ್ ರಿಪೋರ್ಟ್ ಸರ್ಕಾರಕ್ಕೆ ಬಂದಮೇಲೆ ಯಾವ ಕ್ರಮ ಕೈಗೊಳ್ಳಬೇಕು ಅದನ್ನು ಪರಿಶೀಲನೆ ಮಾಡಿ ಈ ಸದನದ ಮುಂದೆ ಇಡುತ್ತೇನೆ ಎಂದು ಕೂಡ ಹೇಳಿದ್ದೆ. ಅದೇ ಪ್ರಕಾರ ಆ ವರದಿ ಬಂದಮೇಲೆ ಆ ವರದಿಯನ್ನು ಇಲ್ಲಿ ಓದಿದ್ದೇನೆ. ಡಾಕ್ಟರು ತೋಳ ಮೇಲೆ ಗಾಯ ಇತ್ತು ಅಂತ ಏನು ವರದಿಯಲ್ಲಿ ಹೇಳಿದ್ದಾರೆ ಅದನ್ನು ಈ ಸದನದಲ್ಲಿ ಓದಿದ್ದೇನೆ. ಯಾರು ಈ ಕೇಸನ್ನು ಎನ್‌ಕ್ವೈರಿ ಮಾಡುತ್ತಿದ್ದರೋ ಆ ಸರ್ಕಲ್ ಇನ್ಸ್‌ಪೆಕ್ಟರನ್ನು ಪೋಲೀಸ್ ಕಮೀಷನರ್ ಸಸ್ಪೆಂಡ್ ಮಾಡಿದ್ದಾರೆ. ಇಲ್ಲಿರತಕ್ಕ ಮಹತ್ತರವಾದ ವಿಷಯ ಏನು ಅಂದರೆ, ಪೋಲೀಸ್ ನಡತೆಯ ಬಗ್ಗೆ ಚರ್ಚಿಸಲಾಗಿದೆ. ಇವತ್ತು ಮಾನ್ಯ ಸದಸ್ಯರನೇಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರಾದ ರಾಮನ್ನಾಯಿಯವರು ಏನು ಹೇಳಿದರು ಅಂದರೆ ಒಂದು ಸಾರಿ ಬಾಡಿಯನ್ನು ಪರೀಕ್ಷೆ ಮಾಡಿದ ಮೇಲೆ ಮತ್ತೆ ಪರೀಕ್ಷೆ ಮಾಡುವ ಅವಕಾಶ ಇಲ್ಲ ಎಂದು. ಬಹುಶಃ ನಾನು ಅವರ ಹಾಗೆ ಪರಿಶೀಲನೆ ಮಾಡಿಲ್ಲ. ಆದರೆ ವಕೀಲರಲ್ಲಿಯೇ ಸಾಕಷ್ಟು ಭಿನ್ನಾಭಿಪ್ರಾಯಗಳು ಬಂದವು; ಕೆಲವರು ಮರುಪರೀಕ್ಷೆ ಮಾಡಬಹುದು ಅಂತ ಹೇಳಿದರು, ಮತ್ತೆ ಕೆಲವರು ಮಾಡಬಾರದು ಅಂತ ಹೇಳಿದರು. ನಮ್ಮ ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್ ೧೭೬ರ ಪ್ರಕಾರ ಮಾಡಬಹುದು ಅಂತ ಕ್ಲಿಯರ್ ಆಗಿದೆ. ಈ ಕಾನೂನಿನಲ್ಲಿ ಅವಕ್ಕೆ ಸಾಕಷ್ಟು ಅವಕಾಶ ಒದಗಿಸಿ ಕೊಟ್ಟಿದ್ದಾರೆ. ಈ ಬಗ್ಗೆ ಕುಮಾರಿ ಪ್ರಮೀಳಾ ಅವರು ಚೆನ್ನಾಗಿ ಹೇಳಿದ್ದಾರೆ. ಮತ್ತೆ ಶ್ರೀಮಾನ್ ರಾಮಸ್ವಾಮಿಯವರು ಇದನ್ನು ರಾಜಕೀಯವಾಗಿ ಪಕ್ಷದ ದೃಷ್ಟಿಯಿಂದ ನೋಡಿ ಚರ್ಚೆ ಮಾಡಬಾರದು, ನಿಜಸ್ಥಿತಿಯನ್ನು ನೋಡಿ ಚರ್ಚೆ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಅಲ್ಲದೆ, ನ್ಯಾಯಾಂಗ ವಿಚಾರಣೆಗೆ ಶಿಫಾರಸು ಮಾಡಬೇಕು ಎಂದೂ ಹೇಳಿದ್ದಾರೆ. ನ್ಯಾಯಾಂಗ ವಿಚಾರಣೆ ಅನ್ನತಕ್ಕದ್ದು ಕೊನೆಯ ಅಸ್ತ್ರ. ಇದರಲ್ಲಿ ಯಾವುದೇ ಅಧಿಕಾರಿಗೆ ಸಹಾಯ ಮಾಡಬೇಕು ಅಂತ ಇಲ್ಲ. ಅಥವಾ ಸಾಧು ಯಾವುದೇ ತರಹ ನಮ್ಮ ಸಂಬಂಧಿಯಲ್ಲ. ನಾನು ಈಗಾಗಲೇ ಸರ್ಕಾರದ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿದ್ದೇನೆ. ಯಾವುದೇ ಸಂದರ್ಭದಲ್ಲೂ, ಯಾವುದೇ ವಿಷಯವನ್ನು ಮುಚ್ಚಿಡುವ ಉದ್ದೇಶ ಸರ್ಕಾರಕ್ಕೆ ಇಲ್ಲ.

ಇವೊತ್ತು ಕ್ರಿಮಿನಲ್ ಕೇಸ್ ಅಂದರೆ ಮಾನ್ಯ ಸದಸ್ಯರೆಲ್ಲರಿಗೂ ಕೂಡ ಗೊತ್ತಿದೆ. ಒಂದಕ್ಕೊಂದು ಜೋಡಣೆ ಮಾಡಿಕೊಂಡು ಹೋಗಿ ಕೋರ್ಟ್‌ನಲ್ಲಿ ಚರ್ಚೆ ಮಾಡಿದ ಹಾಗೆ ಆಗುತ್ತದೆ. ಆ ಅಪರಾಧಿ ಏನು ಆಗಿದ್ದ, ಅವನು ನಡೆಸಿದಂತಹ ಕೃತ್ಯವೇನು ಎಂಬುದನ್ನೆಲ್ಲ ಪತ್ತೆ ಮಾಡಿ ಆತನನ್ನು ಪೋಲೀಸಿನವರು ಬಹಳ ಸಾಹಸ ಮಾಡಿ ಹಿಡಿದಿದ್ದಾರೆ. ಈ ವಿಷಯ ಹೊರಗೆ ಬರಲಿಕ್ಕೆ ಇದರ ಬಗ್ಗೆ ಸಾಕಷ್ಟು ಅವಕಾಶವನ್ನು ಪೋಲೀಸಿನವರಿಗೆ ನೀಡಲಾಗಿತ್ತು. ಆದರೆ, ಈ ಬಗ್ಗೆ ಒಂದು ವಿಚಾರಣೆ ಆಗುತ್ತಿರುವಾಗ ಪೋಲೀಸ್ ಕಸ್ಟಡಿಯಲ್ಲಿ ಆತ ಸತ್ತಿದ್ದಾನೆ ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದರೆ, ಹಿಂದೆಯೂ ಕೂಡ ಪೋಲೀಸ್ ಸ್ಟೇಷನ್‌ನಲ್ಲಿ ಜನ ಸತ್ತು ಹೋಗಿದ್ದಾರೆ, ಹಿಂದಿನ ಗೃಹ ಮಂತ್ರಿಗಳು ಮಾಡಿರತಕ್ಕ ಭಾಷಣ ನನ್ನ ಬಳಿ ಇದೆ, ಅವರು ಯಾವ ಯಾವ ರೀತಿ ಉತ್ತರ ಕೊಟ್ಟಿದ್ದಾರೆ ಅನ್ನುವುದು ನನ್ನ ಹತ್ತಿರ ಇದೆ, ನಾವು ಯಾವುದೇ ಒಂದು ರಾಜಕೀಯವಾಗಿ ಮಾಡಬಾರದು ಅಂತ ಕೆಲವರು ಹೇಳಿದರು. ಮೊನ್ನೆ ದಿವಸ ಮಾನ್ಯ ದೇವೇಗೌಡರು ಮಾತನಾಡುತ್ತಾ, ನಾಳೆ ದಿವಸ ಆ ಬಾಡಿಯನ್ನು ಪುನಃ ಹೊರಗೆ ತೆಗೆಸಿ ನೋಡಿ ಪುನಃ ರಿಪೋರ್ಟ್ ತರಿಸಿ ಅಂತ ಹೇಳಿದರು. ನಾವು ಏತಕ್ಕೋಸ್ಕರ ಇದನ್ನೆಲ್ಲಾ ಮಾಡಿಸಬೇಕಾಯಿತು ಅಂದರೆ ನಮಗೆ ಬಂದಂಥ ಇನ್‌ಕ್ವೆಸ್ಟ್ ರಿಪೋರ್ಟ್ ಪ್ರಕಾರ ಆತನಲ್ಲಿ ಯಾವುದೇ ರೀತಿಯ ಗಾಯಗಳಿಲ್ಲ, ಎಲ್ಲೋ ಒಂದು ಮರ್ಮ ಸ್ಥಳದಲ್ಲಿ ಊದಿಕೊಂಡ ಚಿಹ್ನೆ ಕಾಣುತ್ತಿದೆ ಎಂದು ತಿಳಿಯಿತು. ಆ ವರದಿ ಬಂದ ಮೇಲೆ ಅದನ್ನು ಈ ಸದನದಲ್ಲಿ ಇಟ್ಟಿದ್ದೆ, ಅದನ್ನು ತಾವು ಒಪ್ಪಿಕೊಂಡಿದ್ದೀರಿ. ಒಪ್ಪಿಕೊಂಡ ಮೇಲೆ ಮಾನ್ಯ ದೇವೇಗೌಡರು ವರದಿಯ ಬಗ್ಗೆ ಸಂಶಯ ಇದೆ ಎಂದು ಹೇಳಿದರು. ಆಗ ನಾನು, ಪೋಸ್ಟ್‌ಮಾರ್ಟಮ್ ವರದಿ ಬರಲಿ, ಎರಡನ್ನು ಸದನದ ಮುಂದೆ ಇಡಲಿಕ್ಕೆ ತಯಾರಿದ್ದೇನೆಂದು ಹೇಳಿದೆ. ಅದರ ಪ್ರಕಾರ ಆ ವರದಿ ಬಂದ ಮೇಲೆ ಅದನ್ನು ಈ ಸದನದ ಮುಂದೆ ಇಟ್ಟಿದ್ದೇನೆ ಈ ಸದನದ ಮುಂದೆ ಇಟ್ಟಮೇಲೆ ಮೊದಲಿಗೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಕೊಟ್ಟ ವರದಿಗೂ ಮತ್ತು ಎರಡನೆಯದಾಗಿ ಡಾಕ್ಟರ್ ಕೊಟ್ಟ ವರದಿಗೂ ವ್ಯತ್ಯಾಸ ಬಂದಿದ್ದರಿಂದ ಇದನ್ನು ಅಡಿಷನಲ್ ಮ್ಯಾಜಿಸ್ಟ್ರೇಟ್ ಅವರಿಂದ ವಿಚಾರಣೆ ಮಾಡಿಸಲಾಯಿತು. ಇಲ್ಲಿಯೂ ಕೂಡಲೇ ಕ್ರಮ ಕೈಗೊಂಡಿದ್ದೇವೆ.

ಶ್ರೀ ಹೆಚ್. ಡಿ ದೇವೇಗೌಡ. ನಾನು ಅವೊತ್ತು ಹೇಳಿದ್ದು ನಿಜ. ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಕೊಟ್ಟಂತಹ ಇನ್‌ಕ್ವೆಸ್ಟ್ ರಿಪೋರ್ಟ್‌ನಲ್ಲಿ ಗಾಯ ಇಲ್ಲ ಅಂದಾಗ ಆ ವರದಿಯ ಬಗ್ಗೆ ಸಂಶಯ ವ್ಯಕ್ತಪಡಿಸಿ, ೭ನೇ ತಾರೀಖು ಪತ್ರಿಕೆಯನ್ನು ನೋಡಿ ಗಾಯ ಇದೆ ಅನ್ನುವುದು ಖಚಿತವಾಯಿತು. ಇದರ ಬಗ್ಗೆ ೭ನೇ ತಾರೀಖು ಪತ್ರಿಕೆಯಲ್ಲಿ ವರದಿಯಾಗಿದೆ. ಈಗ ಏನಾಗಿದೆ ಅಂದರೆ ೭-೮ ದಿವಸ ಆದ ಮೇಲೆ ಅಲ್ಲಿ ನಿಲ್ಲಲಿಕ್ಕೆ ಸಾಧ್ಯವಿಲ್ಲ, ಏಕೆಂದರೆ, ಬಾಡಿ ಡೀಕಂಪೋಸ್ ಆಗಿದೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯಾವ ರೀತಿ ಸಮರ್ಥನೆ ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ. ಮೊನ್ನೆ ಪತ್ರಿಕೆಯವರನ್ನು ಅಲ್ಲಿಗೆ ಏತಕ್ಕೆ ಬಿಡಲಿಲ್ಲ ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅವರು ಕೊಟ್ಟಂತಹ ವರದಿಗೂ ಮತ್ತು ಡಾಕ್ಟರು ಕೊಟ್ಟಂತಹ ವರದಿಗೂ ವ್ಯತ್ಯಾಸ ಬಂದದ್ದರಿಂದ ನಾವು ಕೂಡಲೇ ಯಾವುದನ್ನು ಟೀಕೆ ಮಾಡದೆ ಮುಂದಿನ ಕ್ರಮ ಕೈಗೊಂಡಿದ್ದೇವೆ, ಕಾನೂನಿಗೆ ವಿರುದ್ಧವಾಗಿ ವರ್ತನೆ ಮಾಡಿದವರಿಗೆ ಸಹಾಯ ಮಾಡಬೇಕು ಅಂತ ಸರ್ಕಾರಕ್ಕೆ ಉದ್ದೇಶ ಇಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಅಡಿಷನಲ್ ಮ್ಯಾಜಿಸ್ಟ್ರೇಟ್ ಅವರಿಗೆ ಕೂಡಲೇ ಬಾಡಿಯನ್ನು ತೆಗೆಸಿ ನೋಡಲಿಕ್ಕೆ ತಿಳಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಪೋಲೀಸ್ ಇನ್‌ವೆಸ್ಟಿಗೇಷನ್ ಆಫೀಸರ್ ಯಾರು ಇದ್ದರು ಅವರನ್ನು ಕೂಡಲೇ ಪೋಲೀಸ್ ಕಮಿಷನರ್ ಅವರು ಸಸ್ಪೆಂಡ್ ಮಾಡಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ದೇವೇಗೌಡರು ಮಾತನಾಡುತ್ತಾ, ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದು ಅಂಥ ದೊಡ್ಡ ವಿಶೇಷವೇನೂ ಅಲ್ಲ, ಅದನ್ನು ಯಾವರೀತಿ ಬೇಕಾದರೂ ಮಾಡಬಹುದಿತ್ತು ಎಂದು ಹೇಳಿದರು. ನಾವು ಆತನನ್ನು ಸಸ್ಪೆಂಡ್ ಮಾಡದೆ ಇದ್ದಿದ್ದರೆ 'I want to know from the Government whether the Government has suspended the Officer or not' ಎಂದು ಕೆಲವರು ಪ್ರಶ್ನೆ ಕೇಳುತ್ತಿದ್ದರು ಈಗ ಸಸ್ಪೆಂಡ್ ಮಾಡಿದ ಮೇಲೆ ಅವರೊಬ್ಬರನ್ನೇ ಏತಕ್ಕೆ ಸಸ್ಪೆಂಡ್ ಮಾಡಿದಿರಿ, ಇನ್ನೂ ೪ ಜನರನ್ನು ಸಸ್ಪೆಂಡ್ ಮಾಡಿ ಎಂದು ಹೇಳುತ್ತಾರೆ. ಈ ರೀತಿ ಸಸ್ಪೆಂಡ್ ಮಾಡುವುದರಿಂದಲೇ ಎಲ್ಲ ವ್ಯವಹಾರಗಳೂ ಮುಗಿಯುತ್ತವೆಯೋ? Suspension is not a punishment ಎಂದು ಮಾನ್ಯ ಸಹ ನಾಯಕರು ಮತ್ತು ಮಾನ್ಯ ಆನಂದರಾವ್‌ರವರು ಹೇಳಿದರು, ಅದು ಬಹಳ ಸಂತೋಷ. ಸರ್ಕಾರದಲ್ಲಿ ಅನೇಕ ವರ್ಷಗಳಿಂದ ಈ

ಒಂದು ಪದ್ಧತಿ ನಡೆದುಕೊಂಡು ಬರುತ್ತಿದೆ. ಇನ್ನು ಮೇಲೆ ಯಾವುದಾದರೂ ಇನ್ನೊಂದು ಹೊಸ ಸರ್ಕಾರ ಬಂದು ಹಿಂದಿನ ಪದ್ಧತಿಗಳಾವುವೂ ಸರಿಯಾಗಿಲ್ಲ, ಇದನ್ನು ಬೇರೆ ರೀತಿ ಮಾಡಬೇಕೆಂದು ಹೊಸ ಬದಲಾವಣೆಗಳನ್ನು ಮಾಡಿದರೆ ಆಗ ನಾವು ಅದನ್ನು ಅನುಸರಿಸಬಹುದು. ಸಿ.ಪಿ.ಸಿ. ಯಲ್ಲಿ, ಐ.ಪಿ.ಸಿ. ಯಲ್ಲಿ ಏನಿದೆ, ಮತ್ತು ಇಂಥ ಪ್ರಕರಣಗಳಲ್ಲಿ ಕೋರ್ಟಿನಲ್ಲಿ ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ ಆ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆ. ಈಗ ಮಾನ್ಯ ಸದಸ್ಯರ ಬತ್ತಾಯದ ಮೇರೆಗೆ ಇನ್ನೊಬ್ಬ ದೊಡ್ಡ ಡಾಕ್ಟರನ್ನು ಕರೆದುಕೊಂಡು ಬಂದು ಪೋಸ್ಟ್‌ಮಾರ್ಟಂ ಮಾಡಿಸಿದ್ದೇವೆ. ಇನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ಇಂಥ ಪ್ರಕರಣ ಎಷ್ಟನೇ ಸಾರಿ ಆಗುತ್ತಿದೆ ಎಂದು ಕೇಳಿದರು. ಇಂಥ ಪ್ರಕರಣ ಎರಡು ಮೂರು ಸಾರಿ ಆಗಿರಬಹುದು. ಈಗ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ರ ವರದಿಯನ್ನೂ ಮತ್ತು ಇನ್ನೊಬ್ಬ ದೊಡ್ಡ ಡಾಕ್ಟರ್‌ರವರ ವರದಿಯನ್ನೂ ನೋಡೋಣ. ಎರಡನ್ನೂ ಪರಿಶೀಲನೆ ಮಾಡಿ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ. ಇದಕ್ಕೆ ಒಂದು ಪ್ರತ್ಯೇಕವಾದ ಇಲಾಖೆಯೇ ಇದೆ. ಇಷ್ಟನ್ನು ಬಿಟ್ಟರೆ ಹೆಚ್ಚಿನ ವಿಶೇಷ ಇನ್ನೇನೂ ಇಲ್ಲ.

ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಮಾತ್ರ ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ. ಯಾವ ಅಧಿಕಾರಿಯನ್ನೂ ಕೂಡ ರಕ್ಷಣೆ ಮಾಡಬೇಕೆಂಬ ದುರುದ್ದೇಶ ನಮ್ಮ ಸರ್ಕಾರಕ್ಕೆ ಖಂಡಿತ ಇಲ್ಲ. ಮತ್ತು ಆ ಸಾಧು ಮಾಡಿದಂಥ ಕೃತ್ಯದ ಬಗ್ಗೆ ನಾವು ಸಾಕಷ್ಟು ಗಮನಹರಿಸಬೇಕಾಗಿದೆ. ಈ ಮಾತನ್ನು ಬಹುಶಃ ಎಲ್ಲ ಮಾನ್ಯ ಸದಸ್ಯರೂ ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇಷ್ಟೇ ಅಲ್ಲದೆ ಆ ಸಾಧು ಮಾಡಿರತಕ್ಕ ಇನ್ನೂ ಅನೇಕ ತಪ್ಪುಗಳೇನಿವೆ ಅವುಗಳನ್ನು ಸರ್ಕಾರ ಬಹಿರಂಗಪಡಿಸಿದರೆ ನಾವು ಸರ್ಕಾರವನ್ನು ಪ್ರಶಂಸಿಸುತ್ತೇವೆಂದೂ ಕೂಡ ಅನೇಕ ಸದಸ್ಯರು ಹೇಳಿದ್ದಾರೆ, ನಾವು ಇನ್ನೂ ಪ್ರಥಮ ಹಂತದಲ್ಲೇ ಇದ್ದೇವೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಳೆದ ಒಂದೆರಡು ವರ್ಷಗಳಿಂದ ಇಂಥ ಪ್ರಕರಣಗಳು ಒಂದಲ್ಲೊಂದು ರೀತಿಯಲ್ಲಿ ನಡೆಯುತ್ತಿದ್ದು ಬೆಂಗಳೂರಿನ ಜನತೆಯ ಮನಸ್ಸನ್ನು ಕಲಕುತ್ತಲೇ ಇದೆ. ಉದಾಹರಣೆಗೆ, ಆಟೋ ರಿಕ್ಷಾಗಳಲ್ಲಿ ಹೋಗುವಾಗ ಶೀಲಭಂಗ ಮಾಡುವುದಕ್ಕೆ ಪ್ರಯತ್ನ ಪಟ್ಟರು, ಸಿನಿಮಾದಿಂದ ಬರುವಾಗ ಗೂಂಡಾಗಳು ಅಡ್ಡ ಬಂದು ಗಲಾಟೆ ಮಾಡಿದರು, ಎಂದು ಮುಂತಾಗಿ ಕೇಳುತ್ತಲೇ ಇದ್ದೇವೆ. ಹಿಂದೆ ಆಗುತ್ತಿದ್ದ ಘಟನೆಗಳಿಗೂ, ಇಂದಿನ ಘಟನೆಗೂ ಏನಾದರೂ ಸಂಬಂಧ ಇದೆಯೇ ಎಂಬುದನ್ನು ನಾವು ಪೋಲೀಸ್ ಇಲಾಖೆಯ ಮೂಲಕ ವಿಚಾರಣೆ ಮಾಡಿಸಬೇಕಾಗಿದೆ. ಆ ವಿಚಾರಣೆ ನಡೆದ ಮೇಲೆ ಏನು ವರದಿ ನಮಗೆ ಬರುತ್ತದೋ ಅದನ್ನು ನಿಷ್ಪಕ್ಷಪಾತವಾಗಿ ಸಭೆಯ ಮುಂದಿಡುತ್ತೇನೆ, ಅನಂತರ ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುತ್ತದೆ. ಅದು ಬಿಟ್ಟು ಈ ಕೂಡಲೇ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ತಾವು ಹಟ ಹಿಡಿಯುವುದು ಸರಿಯಲ್ಲ ಜುಡಿಷಿಯಲ್ ಎನ್‌ಕ್ವೈರಿ ಕೊನೆಯ ಅಸ್ತ್ರ. ತಾವು ಈ ರೀತಿ ಹಟ ಹಿಡಿಯುವುದಾದರೆ ಹಿಂದೆ ಈ ಕರ್ನಾಟಕ ರಾಜ್ಯದಲ್ಲಿ ಯಾವ ಯಾವ ಪೋಲೀಸ್ ಸ್ಟೇಷನ್‌ನಲ್ಲಿ ಎಷ್ಟೆಷ್ಟು ಜನ ಸತ್ತಿದ್ದಾರೆ, ಆಗ ಯಾವ ಯಾವ ಪಕ್ಷಗಳು ಆಡಳಿತದಲ್ಲಿದ್ದವು ಅವರು ಆ ಘಟನೆಗಳ ಬಗ್ಗೆ ಎಷ್ಟು ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಿದ್ದಾರೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಇನ್ನೂ ಮುಂತಾದ ವಿಚಾರಗಳನ್ನೆಲ್ಲಾ ನಾನೂ ಕೂಡ ಕೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕೆಂದು ಹೇಳುವುದಾದರೆ, ನಾನಾದರೂ ಹೇಳುವುದಿಷ್ಟೆ, ನಾಳೆಯ ದಿನ ಪೋಲೀಸ್ ವರದಿ ನಮಗೆ ಏನು ಬರುತ್ತದೆ ಅದನ್ನು ನೋಡಿಕೊಂಡು, ಅದನ್ನು ವಿಚಾರಣೆ ಮಾಡುವುದಕ್ಕೆ ನಮ್ಮಲ್ಲಿ ರತಕ್ಕ ಸಿ.ಓ.ಡಿ. ದಳವನ್ನು ನೇಮಿಸಬೇಕಾಗುತ್ತದೆ. ಇದಕ್ಕೆ ಮಾನ್ಯ ಸದಸ್ಯರು ಸರ್ಕಾರದೊಡನೆ ಸಹಕಾರ ನೀಡಬೇಕಾಗುತ್ತದೆ. ಇದು ಯಾರ ವೈಯುಕ್ತಿಕ ಪ್ರಶ್ನೆಯೂ ಅಲ್ಲ. ಇದೊಂದು ದೊಡ್ಡ ಸಮಸ್ಯೆ, ಇಲ್ಲಿ ತಪ್ಪು ನಡೆದಿದೆ. ಕ್ಷಮಿಸಲಾರದಂಥ ಅನಾಹುತ ನಡೆದಿದೆ. ಅಂದಾಗ ಇಂಥ ಗಹನವಾದ ವಿಚಾರವನ್ನು ವಿಚಾರಣೆ ಮಾಡಿ ಯಾವ ರೀತಿ ಶಿಕ್ಷೆ ಕೊಡಬೇಕೋ ಕೊಡೋಣ. ಆದರೆ ಈ ವಿಚಾರ ಇನ್ನೂ ತನಿಖೆಯ ಹಂತದಲ್ಲೇ ಇರುವಾಗ ಇದನ್ನು ಸದನದಲ್ಲಿ ಪ್ರಸ್ತಾಪ ಮಾಡಿದರೆ ಇದರ ಗಂಭೀರತೆ ಕಡಿಮೆಯಾಗುವುದಲ್ಲದೆ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ, ನಗರದ ನಾಗರೀಕರಿಗೆ ಇರತಕ್ಕ ಅನುಮಾನವನ್ನು ಹೋಗಲಾಡಿಸಿದಂತಾಗುವುದಿಲ್ಲ, ಇದು ರಾಜಕೀಯ ಪರಿಸ್ಥಿತಿಯಾಗಿ ಪರಿಣಮಿಸುವಂತೆ ಮಾಡಬಾರದು.

ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮೂಲಕ ಈ ಸದನಕ್ಕೆ ಆಶ್ವಾಸನೆ ಕೊಡುವುದೇನೆಂದರೆ, ಈ ವಿಚಾರವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ತನಿಖೆ ಮಾಡಿಸುವುದಕ್ಕೆ ಸರ್ಕಾರ ಹಿಂದುಮುಂದು ನೋಡು ವುದಿಲ್ಲ. ಒಂದು ವೇಳೆ ನಾವು ಮಾಡಿದಂಥ ತೀರ್ಮಾನ ಸರಿಯಲ್ಲವೆಂದು ಹೇಳುವುದಾದರೆ ಮುಂದೆ ಇನ್ನೇನು ಮಾಡಬೇಕೆಂಬುದಕ್ಕೂ ನಾನು ಸಿದ್ಧವಾಗಿದ್ದೇನೆ. ಆದರೆ ನ್ಯಾಯಾಂಗ ತನಿಖೆ ಆಗಲೇಬೇಕೆಂದು ತಾವು ಏನು ಕೇಳುತ್ತಿದ್ದೀರಿ ಅದಕ್ಕೆ ಸರ್ಕಾರ ಸಿದ್ದವಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಆ ಸಾಧು ಪೋಲೀಸ್ ಸ್ಟೇಷನ್‌ನಲ್ಲಿ ಸತ್ತಿದ್ದಾನೆಂದು ಜನರೇನು ತಳಮಳ ಗೊಳ್ಳುತ್ತಿಲ್ಲ. ಪಾಪ, ೫–೧೦ ವರ್ಷದ ಮಕ್ಕಳುಗಳನ್ನು ಕಳೆದುಕೊಂಡ ತಾಯಿ ತಂದೆಗಳು ಯಾರಿ ದ್ದಾರೆ, ಅವರು ಇದೇ ರೀತಿಯ ದುಷ್ಕೃತ್ಯಗಳು ಇನ್ನು ಮುಂದೆಯೂ ಆಗಬಹುದು, ಇದು ಈ ಊರಿ ನಲ್ಲಿ ಮಾತ್ರವಲ್ಲ, ಬೇರೆ ಬೇರೆ ಊರುಗಳಲ್ಲೂ ಆಗಿರಬಹುದು, ಇದಕ್ಕಾಗಿ ಏಜೆಂಟ್‌ಗಳು ಇರಬಹುದು ಎಂದು ತಳಮಳಗೊಳ್ಳುತ್ತಿದ್ದಾರೆ.

ನಾನು ಕೊನೆಯದಾಗಿ ಈ ಸದನಕ್ಕೆ ಭರವಸೆ ಕೊಡುವುದಾದರೂ ಇಷ್ಟೆ. ನೊಂದ ನಾಗರೀಕರಿಗೆ ಆಗಿರತಕ್ಕ ಅನ್ಯಾಯವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ತನಿಖೆ ಮಾಡಿಸಿ ಸತ್ಯಾಂಶವನ್ನು ಸಭೆಯ ಮುಂದೆ ಇಡುತ್ತೇನೆ. ಆದರೆ ನ್ಯಾಯಾಂಗ ವಿಚಾರಣೆ ಮಾಡಿಸುವುದಕ್ಕೆ ಮಾತ್ರ ಸರ್ಕಾರ ಸಿದ್ದವಿಲ್ಲ ಎಂದು ಹೇಳಬಯಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಭಾಷಣವನ್ನು ಪರಿಸಮಾಪ್ತಿ ಮಾಡುವಾಗ, ಸಾಧು ಸತ್ತಿದ್ದಕ್ಕೆ ರಾಜ್ಯದ ಜನತೆ ತಳಮಳಗೊಂಡಿಲ್ಲ, ೫-೬ ವರ್ಷದ ಮಕ್ಕಳನ್ನು ಕಳೆದುಕೊಂಡಿದ್ದಕ್ಕಾಗಿ ತಳಮಳಗೊಂಡಿದ್ದಾರೆಂದು ಹೇಳಿದರು. ನಾನಾದರೂ ಹೇಳುವುದಿಷ್ಟೆ. ನಿಮ್ಮ ಪೋಲೀಸ್ ಅಧಿಕಾರಿಗಳು ಕಳೆದ ೨ ವರ್ಷಗಳಿಂದಲೂ ಏನೇನು ತನಿಖೆ ಮಾಡುತ್ತಿದ್ದಾರೆ ಅದರ ಬಗ್ಗೆ ನಾವು ವಸೂಲಿಬಾಜಿ ಮಾಡುವುದಕ್ಕೆ ಹೋಗಿಲ್ಲ. ಸಾಧು ತಪ್ಪು ಮಾಡಿ ದ್ದಾನೆಂದು ಹೇಳುವ ಪದ ತಮ್ಮ ಬಾಯಿಂದ ಬರಬಾರದು, ಪೋಲೀಸ್ ಸ್ಟೇಷನ್‌ಗೆ ನೀವು ಕರೆದು ಕೊಂಡು ಹೋದವರನ್ನೆಲ್ಲಾ ತಪ್ಪಿತಸ್ಥರೆಂದು ಹೇಳುವುದು ಸರಿಯಲ್ಲ,

ಸ್ವಾಮಿ, ತಾವು ಒಂದು ಮಾತನ್ನು ಹೇಳಿದಿರಿ, ''೨ನೇ ಪೋಸ್ಟ್‌ಮಾರ್ಟಂ ರಿಪೋರ್ಟ್ ಬರು ವವರೆಗೂ ಯಾರು ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ'' ಎಂದು. ಹಾಗಾದರೆ ಆ ಪೋಲೀಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡುವ ಅವಶ್ಯಕತೆಯಾದರೂ ಏನಿತ್ತು? ನಾನು ಉದ್ದೇಶ ಪೂರ್ವಕವಾಗಿ ಯಾರ ಮನಸ್ಸನ್ನೂ ನೋಯಿಸುವುದಕ್ಕೆ ಹೋಗುವುದಿಲ್ಲ. ನಾನು ಇದುವರೆಗೆ ಮಾತ ನಾಡಿರತಕ್ಕ ಭಾಷಣಗಳು ಏನಾದರೂ ತಮಗೆ ಬೇಕಾದರೆ ತಾವು ರೆಕಾರ್ಡ್‌ಗಳನ್ನು ತೆಗೆಸಿ ನೋಡಬಹುದು.

ಮಾನ್ಯ ಸಭಾಧ್ಯಕ್ಷರೆ, ಈಗ ತಾನೇ ಮಾನ್ಯ ಮುಖ್ಯ ಮಂತ್ರಿಯವರು ಏನೊಂದು ಆದೇಶವನ್ನು ಕೊಟ್ಟಿದ್ದಾರೆಂದರೆ, '೨ನೇ ಪೋಸ್ಟ್ ಮಾರ್ಟಂ ರಿಪೋರ್ಟ್ ಸರ್ಕಾರಕ್ಕೆ ಬರುವವರೆಗೂ ಯಾರು ತಪ್ಪಿ ತಸ್ಥರೆಂದು ಹೇಳುವುದಕ್ಕಾಗುವುದಿಲ್ಲ' ಎಂದು. ಅದಕ್ಕೆ ನಾನಾದರೂ ಇಷ್ಟು ಮಾತ್ರ ಹೇಳ ಬಯಸುತ್ತೇನೆ.

೫–೩೦ ಪಿ. ಎಂ.

ಅವರು ಆ ಸ್ಥಾನದಲ್ಲಿ ಕುಳಿತುಕೊಂಡು ಹೇಳತಕ್ಕಂಥ ಪ್ರತಿಯೊಂದು ವಾಣಿಗಳು ಬಹಳ ಜವಾಬ್ದಾರಿ ಯಿಂದ ಕೂಡಿದಂಥವುಗಳಾಗಿರುತ್ತವೆ, ಏತಕ್ಕೆಂದರೆ, ಪೋಲೀಸ್ ಅಧಿಕಾರಿ ಒಬ್ಬ ಸಾಧಾರಣ ವ್ಯಕ್ತಿ ಯಾಗಿರುತ್ತಾರೆ, ಅವರನ್ನು ಈಗ ಸಸ್ಪೆಂಡ್ ಮಾಡಿರುತ್ತೀರಿ. ಆದರೆ ಪೋಸ್ಟ್ ಮಾರ್ಟಮ್ ರಿಪೋರ್ಟ್ ಬರುವವರೆಗೆ ಏತಕ್ಕೆ ಅವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು? ದಯವಿಟ್ಟು ಇದಕ್ಕೆ ವಿವರ ಣೆಯನ್ನು ಕೊಡಬೇಕೆಂದು ನನ್ನ ಪ್ರಶ್ನೆಯಾಗಿರುತ್ತದೆ. ಈ ಸಂದರ್ಭದಲ್ಲಿ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಮತ್ತು ಏತಕ್ಕೆ ಮೌನವನ್ನು ತಾಳಿರುತ್ತದೆ ಎಂಬುದಕ್ಕೆ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ. ಪೋಲೀಸ್ ಕಮಿಷನರ್‌ರವರು ಇವತ್ತು ಸರಿಯಾದ ರೀತಿಯಲ್ಲಿ ಕೆಲಸ ಮಾಡಿಲ್ಲವೇ ಎನ್ನುವ ಬಗ್ಗೆ ಸಂಶಯವಾಗಿದೆ. ಅವರಿಗೆ ದೊಡ್ಡ ಅಂತಸ್ತು ಕೊಟ್ಟಿದ್ದೀರಿ ಎನ್ನುವ ಮಾತನ್ನು ಪದೇ ಪದೇ ಕೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ತಮಗಿರ ತಕ್ಕಂಥ ಕಾನೂನು ಬಲದಿಂದ ....

ಒಬ್ಬ ಸದಸ್ಯರು.—ಕ್ಲಾರಿಫಿಕೇಷನ್ ಕೇಳುತ್ತಿದ್ದೀರೋ ಅಥವಾ ವಿಚಾರಣೆಯನ್ನು ಮಾಡುತ್ತಿರುವಿರೋ?

ಶ್ರೀ ಎಚ್. ಡಿ. ದೇವೇಗೌಡ.—ನಾವು ಕ್ಲಾರಿಫಿಕೇಶನ್ ಕೇಳುತ್ತಿದ್ದೇವೆಯೇ ಹೊರತು ವಿಚಾರಣೆಯನ್ನು ಮಾಡುತ್ತಿಲ್ಲ. ನಮಗೆ ಇರತಕ್ಕಂಥದ್ದು ಅಷ್ಟೇ ಕೆಲಸ. ತಮಗೆ ಇರತಕ್ಕಂಥ ಕಾನೂನು ಬಲದಿಂದ, ತಮ್ಮ ಶಕ್ತಿಯನ್ನು ಪ್ರದರ್ಶನ ಮಾಡಬೇಕು. ತಾವು ಒಂದು ಸಾರಿ ಯಾವುದೇ ವಿಚಾರಣೆಯನ್ನು ಮಾಡುವುದಿಲ್ಲವೆಂದು ತಮ್ಮ ಅಂತಿಮ ನಿರ್ಧಾರವನ್ನು ಹೇಳಿದ್ದೀರಿ. ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ನಿಮ್ಮ ಮನ ಹೇಗಿದೆಯೋ ಆ ರೀತಿ ಮಾಡಿ.

ಶ್ರೀ ಆರ್. ಗುಂಡೂರಾವ್.—ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಸಬ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್‌ರವರಿಂದ ಬಂದಿರತಕ್ಕಂಥ ವರದಿಗೂ ಮತ್ತು ಡಾಕ್ಟರಿಂದ ಬಂದಿರತಕ್ಕಂಥ ವರದಿಗೂ ವ್ಯತ್ಯಾಸ ಕಂಡು ಬಂದುದರಿಂದ ಪುನಃ ಅದನ್ನು ಇನ್ನೊಬ್ಬರ ಮೂಲಕ ವಿಚಾರಣೆ ಮಾಡಿಸುತ್ತಿದ್ದೇವೆ ಎಂದು. ಏತಕ್ಕೆಂದರೆ ಮೊದಲು ಮಾಡಿಸಿದವರಿಂದಲೇ ಮತ್ತೆ ತನಿಖೆ ಮಾಡಿಸಿದರೆ ಸಂಶಯ ಬರುವುದಕ್ಕೆ ಕಾರಣವಾಗುತ್ತದೆ. ಸಾರ್ವಜನಿಕ ದೃಷ್ಟಿಯಿಂದ ಪೋಲೀಸ್ ಅಧಿಕಾರಿಯನ್ನು ಕಾನೂನು ವ್ಯಾಪ್ತಿಗೆ ಒಳಪಟ್ಟು ಸಸ್ಪೆಂಡ್ ಮಾಡಿದ್ದೇವೆ. ಸಸ್ಪೆಂಡ್ ಎನ್ನತಕ್ಕಂಥದ್ದು ಒಂದು ಸಣ್ಣ ಪನಿಷಮೆಂಟ್ ಆಗಿರುತ್ತದೆ. ಈ ರೀತಿಯಾಗಿ ಪನಿಷ್ ಮಾಡಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಮಾಡುತ್ತಿಲ್ಲ. ನಿರಪರಾಧಿ ಎಂದು ಕಂಡುಬಂದರೆ ಪನಿಷ್‌ಮೆಂಟನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಉದಾಹರಣೆಗೆ, ಹೇಳುವುದಾದರೆ, ಅನೇಕ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರುಗಳೇ ಇಂಥ ಇನ್‌ಸ್ಪೆಕ್ಟರ್ ಕೈಯಲ್ಲಿ ಈ ರೀತಿಯಾಗಿ ಅನ್ಯಾಯವಾಗಿರುತ್ತದೆ; ಆದ್ದರಿಂದ ಕೂಡಲೇ ತನಿಖೆಯಾಗಬೇಕೆಂದೂ, ಸಿ.ಓ.ಡಿ. ತನಿಖೆಯಾಗಬೇಕೆಂದು ಅರ್ಜಿಗಳನ್ನು ಕೊಟ್ಟಿರುವುದು ಇದೆ. ನಮ್ಮ ಉದ್ದೇಶ ಏನು ಎನ್ನುವ ಚಿತ್ರ ಹೊರಗೆ ಬರುವವರೆಗೂ ಕುಮಾರಿ ಪ್ರಮೀಳಾರವರು ಹೇಳಿದಹಾಗೆ ಹಾಗೂ ಇನ್ನೂ ಅನೇಕ ಸದಸ್ಯರು ಹೇಳಿದ ಹಾಗೆ, ತಪ್ಪಾಗಿದ್ದರೆ ಹೈಕೋರ್ಟ್ ಅದನ್ನು ಕೇಳುತ್ತದೆಂದು ಪುನಃ ಸ್ಪಷ್ಟಪಡಿಸುತ್ತೇನೆ. ಇದರ ಬಗ್ಗೆ ವಿರೋಧ ಪಕ್ಷದವರು ಎಷ್ಟು ಜವಾಬ್ದಾರರಾಗಿರುತ್ತಾರೋ ಅದಕ್ಕಿಂತ ಹೆಚ್ಚಿನ ಜವಾಬ್ದಾರಿಯಿಂದ ನಿಷ್ಪಕ್ಷಪಾತವಾದ ವಿಚಾರಣೆಯ ಕೆಲಸವನ್ನು ಸರ್ಕಾರ ಮಾಡುತ್ತದೆಂದು ಹೇಳುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಏನು ಮಾತನಾಡಿದ್ದಾರೆ, ಆ ಮಾತಿನಿಂದ ಒಂದು ವಿಚಾರ ಬರುತ್ತದೆ. ಸಾಧುವು ಮಕ್ಕಳ ಕತ್ತನ್ನು ಕೊಯ್ದು ಪೂಜೆ ಮಾಡುತ್ತಿದ್ದದರಿಂದ ಆತನಿಗೆ ಶಿಕ್ಷೆಯನ್ನು ಮಾಡಬೇಕು ಎನ್ನುವ ಬಗ್ಗೆ ಯಾರ ಆತಂಕವೂ ಇಲ್ಲ. ನಮಗೂ ಮಕ್ಕಳಿದ್ದಾರೆ; ಮಕ್ಕಳನ್ನು ಕಳೆದುಕೊಂಡಂಥವರಿಗೆ ಎಷ್ಟು ಹೊಟ್ಟೆಯುರಿ ಇದೆಯೋ ಅಷ್ಟೇ ನಮಗೂ ಇದೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೊಲೆಯಾಗಿರತಕ್ಕದ್ದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮರುಕಪಡುವಂಥ ರೀತಿಯಲ್ಲಿ ಹೇಳಿದ್ದಾರೆ. ಸಾಧುವು ಏನು ಇದ್ದಾನೆ ಅವನು ತಪ್ಪಿತಸ್ಥ ಎಂದು ಹೇಳಿಬಿಟ್ಟು ಜನರಿಗೆ ಅನುಕಂಪ ಬರುವಂತೆ ಪ್ರಯತ್ನ ಮಾಡಿದರೆ ಸಾಲದು. ತಪ್ಪಿತಸ್ಥ ಎಂದು ಹೇಳುವವರು ನೀವು ಅಲ್ಲ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರವಾಗಿ ಕೋರ್ಟಿನಲ್ಲಿ ಹೇಳಬೇಕು. ಪೋಲೀಸರ ವಶದಲ್ಲಿದ್ದಾಗ ಸಾಧು ಸತ್ತಿರತಕ್ಕಂಥದ್ದು ನಿಜ. ಆದ್ದರಿಂದ ಪೋಲೀಸ್ ವಶದಲ್ಲಿದ್ದಂತಹ ಸಾಧುವನ್ನು ಯಾರು ಕೊಲೆ ಮಾಡಿದರು ಎಂಬುದನ್ನು ತಾವು ವಿಚಾರಣೆ ಮಾಡಲೇಬೇಕು. ಮತ್ತು ಕೊಲೆ ಮಾಡಿದವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲೇಬೇಕು. ಇದು ಕಾನೂನು ಪ್ರಕಾರ ಮಾಡತಕ್ಕಂಥ ಕೆಲಸ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಸರ್ವ ಸಾಧಾರಣವಾಗಿ ಮಾತನಾಡುತ್ತಿದ್ದಾರೆ. ಅದನ್ನು ನಾವು ನಿರೀಕ್ಷಣೆ ಮಾಡುತ್ತಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಕೊಲೆಯಾಗಿರತಕ್ಕದ್ದು ಕಾನೂನಿಗೆ ವಿರುದ್ಧವಾಗಿದೆ. ಅದಕ್ಕೋಸ್ಕರವಾಗಿ ತನಿಖೆಯಾಗಬೇಕೆಂದು ನಾವು ಕೇಳುತ್ತಾ ಇದ್ದೇವೆ. ಮೊದಲನೆಯದಾಗಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ್ ರಿಪೋರ್ಟ್ ಇದೆ, ಎರಡನೆಯದಾಗಿ ಪೋಸ್ಟ್‌ಮಾರ್ಟಮ್ ರಿಪೋರ್ಟ್ ನಿಮ್ಮಲ್ಲಿರುವಾಗ ಪುನಃ ಬೇರೆಯವರಿಂದ ತನಿಖೆಯಾಗಬೇಕು ಎಂಬ ಸಂಶಯ ನಿಮಗೆ ಏತಕ್ಕೆ ಬಂದಿತು? ಎರಡನೆಯ ಸಾರಿ ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಏನು ಕಾರಣ? ಅದಕ್ಕೋಸ್ಕರವೇ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಶ್ರೀ ಮಾನ್ ಗುಂಡೂರಾಯರು ನನಗೆ ಬಹಳ ದಿವಸಗಳಿಂದ ಸ್ನೇಹಿತರು, ಈಗ ಸ್ವಲ್ಪ ದಿವಸಗಳಿಂದ ಮುಖ್ಯ ಮಂತ್ರಿಗಳಾಗಿದ್ದಾರೆ. ಅವರಿಗೆ ಹೇಳುವುದೇನೆಂದರೆ, ಯಾರು ಪೋಲೀಸ್ ವಶದಲ್ಲಿದ್ದಾಗ ಸತ್ತಿದ್ದಾನೆ ಎನ್ನುವ ಬಗ್ಗೆ ವಾಸ್ತವಾಂಶ ತಿಳಿಯಲು ಜ್ಯುಡಿಷಿಯಲ್ ಎನ್‌ಕ್ವಯರಿ ಆಗಬೇಕು ಎಂದು. ಸ್ವಾಮಿ, ತಾವು

ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇನೆಂದರೆ ಬಹಳ ಸಂತೋಷ. ಮಾಡುವುದಿಲ್ಲವೆಂದರೆ ನಮಗೆ ಅಸಂತೋಷ. ಮಾಡುವುದಿಲ್ಲವೆಂದು ನೀವು ನಿರ್ದಿಷ್ಟವಾಗಿ ನಿಮ್ಮ ಮಾತಿನಂತೆ ಹೇಳುವುದಾದರೆ, ನಮ್ಮ ಬುದ್ಧಿಗೆ ತೋಚಿದಂತೆ ನಾವು ನಡೆದುಕೊಳ್ಳುವುದು ನಮ್ಮ ಕರ್ತವ್ಯವಾಗಿರುತ್ತದೆ. ನಿಮ್ಮ ನಿರ್ಧಾರದ ಮುಂದೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ನಾವು ಹೇಳುವುದನ್ನೆಲ್ಲ ಹೇಳಿದ್ದೇವೆ. ಇನ್ನು ನಮ್ಮ ಬುದ್ಧಿವಂತಿಕೆಯನ್ನು ನಮ್ಮ ಕೈಯಲ್ಲಿಟ್ಟುಕೊಂಡು ವಾಕ್‌ಔಟ್ ಮಾಡುವುದು ಒಳ್ಳೆಯದೆಂದು ಕಾಣುತ್ತದೆ.

ಶ್ರೀ ಎಸ್. ಎಸ್. ಆರಕೇರಿ.—ನೀವು ನಮ್ಮ ಮಾತನ್ನು ಯಾವಾಗ ಕೇಳಿದ್ದೀರಿ?

(ವಿರೋಧ ಪಕ್ಷದ ಎಲ್ಲ ಮಾನ್ಯ ಸದಸ್ಯರುಗಳು ಹೊರಗೆ ಹೋಗಲು ಆರಂಭಿಸುವರು)

MR SPEAKER.—Now the House stands adjourned to meet again tomorrow at 1-00 P. M.

The House adjourned at Forty minutes past five of the Clock to mee again at One of the Clock on Wednesday, the 12th March, 1980.